# ಕಲ್ಲಳ್ಳಿ ಕಾವ್ಯಯಾನ: ನುಡಿಕುಲುಮೆಯೊಳು ಅರಳಿದ ನವಬೆಳಗು

**ಡಾ. ಕುಪ್ಪನಹಳ್ಳಿ ಎಂ. ಭೈರಪ್ಪ**
ಕನ್ನಡ ಸಹಾಯಕ ಪ್ರಾಧ್ಯಾಪಕ
ಮಾನವಿಕ ಮತ್ತು ಭಾಷಾ ನಿಕಾಯ
ಕ್ರಿಸ್ತು ಜಯಂತಿ ಕಾಲೇಜು ಸ್ವಾಯತ್ತ
ಕೆ. ನಾರಾಯಣಪುರ, ಬೆಂಗಳೂರು–560077
byrappa@kristujayanti.com

ಸಾವಿರಾರು ವರ್ಷಗಳ ಚರಿತ್ರೆಯಿರುವ ಕನ್ನಡ ಕಾವ್ಯ ಪರಂಪರೆಯಲ್ಲಿ 'ಕುರಿತೋದದೆಯುಂ ಕಾವ್ಯಪ್ರಯೋಗಪರಿಣತಮತಿಗಳ್' ಆಗಿದ್ದ ಕಾವ್ಯಯಾನವು ಈ ಭುವಿಯೊಳಗಿನ ಭವಿಗಳ ಬದುಕು ಕವಿತ್ವದ ಮೂಲಕ ಹಸನಾದ ಬಗೆಯನ್ನು ತಿಳಿಸಿಕೊಡುತ್ತದೆ. ಭವಿಗಳು ಹೀಗೆ ನಿರಂತರವಾಗಿ ಕವಿಗಳಾಗುತ್ತ ಬಾಳು ಬೆಳಗಿಕೊಂಡು ಮನುಷ್ಯಜೀವಿಗಳಾಗಿದ್ದು. ಕನ್ನಡದ ಆದಿಕವಿ–ಮಹಾಕವಿ ಪಂಪನು 'ಬೆಳಗುವೆನಿಲ್ಲಿ ಲೌಕಿಕಮನ್ ಅಲ್ಲಿ ಜಿನಾಗಮಮುಂ' ಎಂದು ತನ್ನ ಕಾವ್ಯದ ಮಹೋದ್ದೇಶವನ್ನು ತಿಳಿಯಪಡಿಸಿದ್ದಾನೆ. ಆದ್ದರಿಂದ ಕಾವ್ಯ ರಚಿಸುವುದೆಂದರೆ ನಾವು ಮನುಷ್ಯರಾಗುವುದು ಹಾಗೂ ಲೋಕದ ಸಹಜೀವರು ಮನುಷ್ಯರಾಗುವಂತೆ ಆಶಿಸುವುದೇ ಆಗಿದೆ. ಈ ಮಾರ್ಗದಲ್ಲಿ ಸಾಮಾನ್ಯ ಕಣ್ಣಿಗೆ ಕಾಣದ ಲೋಕದ ಸಂಗತಿಗಳನ್ನು ಕವಿಮನಸು ತನ್ನ ಅಂತರ್ಗಣ್ಣಿನ ಮೂಲಕ ದರ್ಶಿಸುತ್ತದೆ. ತನ್ನ ತಾ ಬೆಳಗಿಕೊಳ್ಳುವ ಮೂಲಕ ಲೋಕವನ್ನು ಬೆಳಗುವ ಕೈಂಕರ್ಯದತ್ತ ಕಾವ್ಯವು ಪಯಣಿಸುತ್ತದೆ.

ಕಾವ್ಯವೆಂದರೆ ಬರೀ ಪದಜೋಡಣೆಯಲ್ಲ. ಕಾವ್ಯವು ಕೃತಕ ಕಲ್ಪನೆ ಹಾಗೂ ಅನಾನುಭಾವಗಳ ಕಟ್ಟಾಗಿಬಿಟ್ಟರೆ ಯಾವುದೇ ಉಪಯೋಗವಿಲ್ಲ. ಅದು ಲೋಕವಿದೂರ ಕಲ್ಪನಾಸ್ತರದೊಳಗೆ ವಿಹರಿಸುವ ಭ್ರಮಾತ್ಮಕವೂ ಕ್ಷಣಿಕವೂ ಆಗಿಬಿಡಬಹುದು. ಅಥವಾ ಆತ್ಮವಂಚನೆಯೂ, ಲೋಕವಂಚನೆಯೂ ಆಗಿಬಿಡಬಹುದು. ಕಲ್ಪನಾಕಾವ್ಯದ ಯುಗ ಮುಗಿದು, ಹೊಸಕಾಲದ ಕಾವ್ಯಯಾನವು ತನ್ನದೇ ಆದ 'ಮ್ಯಾಜಿಕಲ್ ರಿಯಲಿಸಂ' ರೀತಿಯ ಸೃಜನಶೀಲ ಆದ್ಯತೆಯಲ್ಲಿ ಅನಾವರಣಗೊಂಡಿರುವುದು ಮಹತ್ವದ ಸಂಗತಿಯಾಗಿದೆ. ಕಾಲನಿಷ್ಠವೂ ಕಾಲಾತೀತವೂ ಆಗಬಲ್ಲ ಕಾವ್ಯವು ಅನುಭಾವಿಕ ದರ್ಶನ ಹಾಗೂ ಸೃಜನಾತ್ಮಕ ಕಲ್ಪನೆಗಳ ಕೂಡಲಸಂಗಮವೇ ಆಗಿರುತ್ತದೆ. ಅದೊಂದು ಮಾನಸಿಕ ಸ್ಥಿತಿಯ ನಿಲುಗಡೆಯೂ ಹೌದು, ಬಿಡುಗಡೆಯೂ ಹೌದು. ನಿಲುಗಡೆಯೆಂದರೆ ಎತ್ತೆತ್ತಲೋ ಹರಿವ

ಮನವನ್ನು ಸರಿಯಾಗಿ ಹಿಡಿದು ನಿಲ್ಲಿಸಿ, ಜಾಗೃತಗೊಳಿಸುವ ಧ್ಯಾನಸ್ಥ ಸ್ಥಿತಿ. ಬಿಡುಗಡೆಯೆಂದರೆ ತನ್ನೊಳಗೆ ಹಾಗೂ ಲೋಕದೊಳಗೆ ಮೂಡುವ ಮತ್ತು ಕಾಡುವ ಭಾವಾನುಭಾವಗಳನ್ನು ಕಲಾತ್ಮಕವಾಗಿ ಹೊರಹೊಮ್ಮಿಸುವುದು. ಹಾಗೆಯೇ ಸಂಕಟ ಹಾಗೂ ಸಂಭ್ರಮಗಳ ಸೀಮೆಯನ್ನು ದಾಟಿ ಸೀಮಾತೀತಗೊಳ್ಳುವುದು.

ಹೆಣ್ಣೊಬ್ಬಳು ತಾಯಿಯಾಗುವ ಹೊತ್ತಲ್ಲಿ ಅನುಭವಿಸುವ ಸಂಕಟ ಹಾಗೂ ಸಂಭ್ರಮಗಳನ್ನು ದಾಟಿ ಕೂಸನ್ನು ಹಡೆದಾಗ ಮೂಡುವ ಸಮಾಧಾನದಂತೆ ಕಾವ್ಯವು ಕವಿ ಹಾಗೂ ಸಹೃದಯರಲ್ಲಿ ನವಚಿಂತನೆ ಹಾಗೂ ನವಚೈತನ್ಯವನ್ನು ಮೂಡಿಸುತ್ತದೆ. ಇಂಥ ಕವಿತಾಸೃಷ್ಟಿಯ ಅನುಭವವು ಅನಿರ್ವನೀಯ. ಆಂತರ್ಯದೊಳಗಿಂದ ಅರಳಿಬಂದ ಆ ಅಕ್ಷರಪುಷ್ಪವೆಂಬ ಕಾವ್ಯಸುಗಂಧವನ್ನು ನಾವು ನಮ್ಮ ಮಿತಿಯಲ್ಲಿ ಮಾತ್ರ ಆಸ್ವಾದಿಸಬಹುದಷ್ಟೇ. ಆದರೆ, ಸೃಜನಶೀಲ ಸುಮವು ಅರಳಿದ ಘಳಿಗೆಗಳನ್ನು ತಾಯಿಹೃದಯದ ಕವಿ ಮಾತ್ರ ಅನುಭವಿಸಬಲ್ಲ. ಹೀಗೆ, ವಿಶಿಷ್ಟ ಸಂದರ್ಭಕ್ಕೆ ಮಾತು–ಮನಂಗಳ ನಡುವೆ ನಡೆದ ನುಡಿಕುಲುಮೆಯಲ್ಲಿ ಅರಳುವ ನವಬೆಳಗು ಕಾವ್ಯ. ಜೊತೆಗೆ ಲೋಕದ ವಿದ್ಯಮಾನಗಳ ಸೃಜನಶೀಲ ಕಾಲಕನ್ನಡಿಯೂ ಹೌದು; ಕವಿಮನದ ಒಳಗನ್ನಡಿಯೂ ಹೌದು.

ಕನ್ನಡ ಕಾವ್ಯಯಾನದಲ್ಲಿ ಹಲವಾರು ಕವಿಗಳು ತಮ್ಮದೇ ಅಸ್ಮಿತೆಯುಳ್ಳ ಕವಿರಾಜಮಾರ್ಗಗಳನ್ನು ಹಾಕಿಕೊಟ್ಟಿದ್ದಾರೆ. ಜಾನಪದ ನುಡಿಕಾರಮಾರ್ಗ, ತತ್ವಪದಕಾರ ಮಾರ್ಗ, ಪಂಪ ಮಾರ್ಗ, ರನ್ನಮಾರ್ಗ, ವಚನಕಾರರ ಮಾರ್ಗ, ಕೀರ್ತನಕಾರರ ಮಾರ್ಗ, ಕುಮಾರವ್ಯಾಸ ಮಾರ್ಗ, ಕುವೆಂಪು ಮಾರ್ಗ, ಬೇಂದ್ರೆ ಮಾರ್ಗ, ಅಡಿಗ ಮಾರ್ಗ, ದೇವನೂರ ಮಹಾದೇವ ಮಾರ್ಗ, ಸಿದ್ಧಲಿಂಗಯ್ಯ ಮಾರ್ಗ, ಕೆ.ರಾಮಯ್ಯ ಮಾರ್ಗ, ಲಕ್ಷ್ಮೀಪತಿ ಕೋಲಾರ, ಪ್ರತಿಭಾ ಮಾರ್ಗ, ಮುಕ್ತಾಯಕ್ಕ ಮಾರ್ಗ, ಕೆ.ಷರಿಫ ಮಾರ್ಗ–ಹೀಗೆ ಕನ್ನಡ ಕಾವ್ಯಯಾನದ ವಿಶಿಷ್ಟ ದನಿಗಳು ಚಾರಿತ್ರಿಕ ಮಹತ್ವವನ್ನು ಪಡೆದುಕೊಂಡಿರುವಂಥವು. ಈ ದಿಸೆಯಲ್ಲಿ ಹೊಸತಲೆಮಾರಿನ ಕಾವ್ಯಯಾನಿಗಳಲ್ಲಿ ದೊಡ್ಡಕಲ್ಲಹಳ್ಳಿ ನಾರಾಯಣಪ್ಪ ಅವರ ಕಾವ್ಯಕೃಷಿಯೂ ತನ್ನದೇ ಆದ ಸಾಂಸ್ಕೃತಿಕ ಮಹತ್ವವುಳ್ಳದ್ದಾಗಿದೆ. ಲೋಕದೊಳಿತಿಗಾಗಿ ತನ್ನೊಳಗೆ ತಾ ಉರಿಯುತ, ತನ್ನೊಳಗೆ ಅರಿಯುತ, ತನ್ನೊಳಗೆ ತಾ ತೇಯುತ, ತನ್ನೊಳಗಣ ಭಾವಾನುಭಾವಗಳೊಂದಿಗೆ ಬೆರೆಯುತ, ಬೇಯುತ ನುಡಿಬೆಳಗುವ ಧ್ಯಾನಸ್ಥ ಕಾವ್ಯಯಾನಿ ಕಲ್ಲಳ್ಳಿ. ಈ ಕಾರಣದಿಂದ, ಕನ್ನಡ ಕಾವ್ಯಯಾನದೊಳು ಮೂಡಿಬಂದಿರುವ "ಕಲ್ಲಳ್ಳಿ ಕಾವ್ಯಮಾರ್ಗ"ವೂ ತನ್ನದೇ ಅಸ್ಮಿತೆಯಲ್ಲಿ ಅನಾವರಣಗೊಂಡಿದೆ ಎಂದರೆ ಅತಿಶಯೋಕ್ತಿಯೇನಲ್ಲ.

**"ಬಾ ಇಲ್ಲಿ ಕುಳಿತುಕೋ**

**ಒಂದಿಷ್ಟು ಮಳೆಯಾಗುವ ಹೊಳೆಯಾಗುವ**

**ಸುತ್ತಿ ಸುಳಿಯಾಗುವ ಅಲೆಯಾಗುವ**

**ಹರಿದು ಝರಿಯಾಗುವ**

**ಕಾಡಾಗುವ ಕೂಡಿ ಕಡಲಾಗುವ**

**ಬಾ ಇಲ್ಲಿ ಕುಳಿತುಕೋ**

**ಒಂದಿಷ್ಟು ಕಿಡಿಯಾಗುವ ಕುಡಿಯಾಗುವ**

**ಮಾವಿನ ಮಿಡಿಯಾಗುವ ಬದಲಾಗುವ**

**ನಾವು ನಾವಾಗುವ**

**ಬೆಳಕಾಗುವ ಬೆಂದು ಬಯಲಾಗುವ..." (ಬಯಲಾಗುವ)**

ಹೀಗೆ, ತನ್ನ ಒಳಮನವನ್ನೋ, ತನ್ನ ಸಹಜನವನ್ನೋ, ತನ್ನ ಸಹಯಾನಿಯನ್ನೋ ಕರೆಯುವ ಕವಿಯ ಆಪ್ತತೆ ಮನೋಜ್ಞವಾದುದು; ಮನಮುಖಿ–ಜನಮುಖಿ–ನೆಲಮುಖಿ–ಜಲಮುಖಿ ಯಾನದಿಂದೊಡಗೂಡಿದುದು. ಇಲ್ಲಿ ಮಹಾಕವಿ ಬೇಂದ್ರೆ ಅವರ 'ಕುಣಿಯೋಣು ಬಾರಾ', 'ಮನದನ್ನೆ' ಮೊದಲಾದ ಕವಿತೆಗಳು ನೆನಪಾಗುತ್ತವೆ.

**ಕಲ್ಲಳ್ಳಿಯ ಕಷ್ಟ ಕಂಡವರು**

**ಯಾರಾದರೂ ಮನವೊಲಿಸಬಹುದಿತ್ತು**

**ಇರಲಿ ಬಿಡಿ ಅಪರೂಪಕ್ಕೆ ಸಿಗುವವರಲ್ಲಿ**

**ಆಪ್ತತೆ ಜಾಸ್ತಿಯಂತೆ! (ಆನಂದ)**

**"ಒಂಟಿತನದ ಕುಲುಮೆಯಲ್ಲಿ ಕುಶಲವಾಗಿ**

**ಅರಳಿರುವ ಹೂವುಗಳಿಲ್ಲವೆ ಕಲ್ಲಳ್ಳಿ**

**ಇರಿಯಲು ಕಾದಿರುವ ಕತ್ತಿಯಂಚಿನ**

**ಬೆಳಕಿನಲ್ಲಿ ಚಲಿಸಿ ಥಳಗೊಳ್ಳಬೇಕೆನಿಸುತ್ತಿದೆ..."(ಕತ್ತಿಯಂಚಿನ ಬೆಳಕಿನಲ್ಲಿ...)**

**ಯಾವ ಎಗ್ಗಿಲ್ಲದ ಬದುಕು**

**ಅಪ್ಪ, ಊರ ಚಾಕರಿಯ ದೊರೆ**

**ಕೊಯ್ಲಿಗೆ ಒಂದು ಪಾಲು**

**ಸಂಜೆಗೆ ಒಂದಿಷ್ಟು ಕೋಪ**

**ಜಗಳ ಕಣ್ಣೀರು**

**ಜೀವ ಹಿಂಡುವ ತಿಗಣೆ....**

**ಕಿಸಕ್ಕನೆ ನಕ್ಕು ಕಾಡುತ್ತಿದ್ದ**

**ಮೇಲುಗೇರಿಯ ಬಿಳಿಲಂಗದ ಸೊಣಕಲಿ**

**ಕಣ್ಮುಂದೆ ಸುಳಿದಾಗ**

**ಎದೆಯೊಳಗೆ ಕಂಬಳಿಹುಳ ಚಿಟ್ಟೆಯಾಗುತ್ತದೆ. (ಮಿನುಗು)**

**ಸ್ವಾಭಿಮಾನದ ಹಾದಿಯು ಸ್ಪಷ್ಟವಾಗಿ ಕಾಣುತ್ತಿರುವಾಗ**

**ಓಲೈಸಿಕೊಂಡು ಅಲ್ಲಿಯೂ ಇಲ್ಲಿಯೂ ಸಲ್ಲಬೇಕಂತೆ ನೀನು**

**ಕಲ್ಲಳ್ಳಿಯ ಭರವಸೆಗಳು ಸಾಲು ಸಾಲಾಗಿ ಗಾಯಗೊಳ್ಳುತ್ತಿರುವಾಗ**

**ಭವಿಷ್ಯದ ಸಮಾಧಿಯ ಮೇಲೆ ಸುಳ್ಳನ್ನು ಕೆತ್ತಬೇಕಂತೆ ನೀನು (ಕುಶಾಲು ಪದ ಬರೆಯಬೇಕಂತೆ)**

ಈ ಬಗೆಯ ಕಾವ್ಯಾಭಿವ್ಯಕ್ತಿಯಲ್ಲಿ ಕಲ್ಲಳ್ಳಿ ಕಾವ್ಯವು ವೈಯಕ್ತಿಕ ಆತ್ಮಕಥಾತ್ಮಕವಾಗಿಯೂ ಸಾರ್ವತ್ರಿಕ ಆಪ್ತಕಥಾತ್ಮಕವಾಗಿಯೂ ಕಾಣುತ್ತದೆ. ಹಾಗೆಯೇ ತನ್ನಂಥ ನೋವು, ನಲಿವು, ಒಲವು, ಬಲವು ಉಳ್ಳ ಇತರ ಸಹಜೀವಗಳ ಅಂತರಂಗದ ವ್ಯಥೆ–ಕಥೆಗೂ ಕವಿ ತಣ್ಣನೆಯ ಕಣ್ಣಾಗಬಲ್ಲರು.

**ದೇವರೆಂಬ ಶಾಶ್ವತ ಶವವನ್ನು**

**ಅಲಂಕರಿಸಿದ ಹೂಗಳೆಲ್ಲ**

**ಉಸಿರುಗಟ್ಟಿಸುವ ಗಂಧ ಧೂಪ**

**ಆರತಿಗಳೆಂಬ ವಿಷಾಯುಧಗಳ ಬಗ್ಗೆ**

**ಗಜಲ್ ಬರೆದು**

**ಸಾವನ್ನು ಸ್ವಾಗತಿಸುತ್ತಿವೆ....**

**ಕಾವ್ಯಶಾಸ್ತ್ರ ಸಮಾಜದಿಂದ**

**ಬಹಿಷ್ಕಾರಗೊಂಡ ಕವಿಯೊಬ್ಬ**

**"ಓ ನಿಸರ್ಗವೇ ಈ ಹೂಗಳಿಗೆ**

**ಬೆಂಕಿಯನ್ನೂ, ವಿಷವನ್ನೂ ಜೊತೆಗೆ**

**ಮಾತನ್ನು ದಯಪಾಲಿಸು ತಂದೆ"**

**ಎಂದು ಬರೆದು ಪಾರ್ಕೊಂದರಲಿ**

**ಎಸೆದು ಹೋದ ಕಾಗದ ಬಿದ್ದು ಬಿದ್ದು ನಗುತಿದೆ." (ಅಸಹಾಯಕತೆ)**

ಜೀವವುಳ್ಳ ಮಾನವರು ತಮ್ಮ ದುರಾಸೆ, ದೌರ್ಜನ್ಯಗಳಿಂದ ಸಹಜೀವರ ಸಂಕಟಗಳಿಗೆ ಸ್ಪಂದಿಸದೆ ನಿರ್ಜೀವರಂತಾಗುತ್ತಿರುವ ಕವಿಮನವು ಮೌನವಾಗಿರಲಾಗದು. ಮಾತನಾಡಲಾಗದ ನಿರ್ಜೀವ ವಸ್ತುಗಳನ್ನು ಮಾತನಾಡಿಸುವ ಮೂಲಕ ನಿರ್ಜೀವಗೊಂಡ ಜೀವರುಗಳ ಕಣ್ಣು ತೆರೆಸುವ ಕೈಂಕರ್ಯವನ್ನು ಕೈಗೊಳ್ಳುವಲ್ಲಿ ಮಹತ್ತರ ಪಾತ್ರ ವಹಿಸುತ್ತದೆ. ಈ ದಿಸೆಯಲ್ಲಿ ಕಲ್ಲಳ್ಳಿಯವರ 'ಕಲ್ಲಿನ ಪದ' ಮೊದಲಾದ ಕವಿತೆಗಳು ನಿರ್ಜೀವವೆಂದು ನಿರ್ಲಕ್ಷಿಸಿದ ವಸ್ತು-ನಿಸರ್ಗದ ಒಡಲದನಿಯಾಗಿ ಮೂಡಿಬಂದಿವೆ. ನಾಗರೀಕತೆಯ ವಿಪರೀತತೆಗೆ ಹಾಗೂ ಮಾನುಷ ಅಟ್ಟಹಾಸಕ್ಕೆ ಹಿಡಿದ ಕನ್ನಡಿಯಾಗಿದೆ.

**ಶಿಲೆಗಳ ಒಡಲಲ್ಲಿ ಕರುಳೇ ಕರಗುವಂತ**

**ಕೂಗೊಂದು ಕೇಳುತಿದೆ...**

**ಹೊನ್ನ ಕೊಟ್ಟೇವು ನಾವು ಅನ್ನ ಕೊಟ್ಟೆವು**

**ಕರುನಾಡಿನ ಸಿರಿಯಾದೇವು । ನಾವು ಕರಗಿ ಖಾಲಿಯಾದೆವು**

**ಜಾರೋ ಬಂಡೆಯಿಲ್ಲ, ಬೆಟ್ಟ ಬಯಲಾಯಿತಲ್ಲ**

**ಸಾವಿರಾರು ಲಾರಿ ಬಂದವು । ಸಾವಿನ ರಾಯಭಾರಿಗಳು ಬಂದವು**

DOI: 10.59176
http://www.kristujayantijournal.com/index.php/KJKSP

**ನೆಲದ ಪಾಯ ನಾವು ಮಣ್ಣಿನ ಮೂಲ ನಾವು**

**ಸತ್ತು ಹೋಗುತ್ತಿರುವೆವು । ನಾಶದ ಸೂಚನೆ ನೀಡುತ್ತಿರುವೆವು....(ಕಲ್ಲಿನ ಪದ)**

ಕಲ್ಲಳ್ಳಿ ಅವರು ಕವಿ ಮಾತ್ರವಲ್ಲ; ಜೀವಪರತೆಯ ನ್ಯಾಯವಾದಿ. ಲೋಕದೊಳಗೆ ಘಟಿಸುವ ಹುಟ್ಟು–ಸಾವುಗಳು ಮನುಷ್ಯಕೇಂದ್ರಿತ ಶಾಶ್ವತ ನಡಾವಳಿಗಳಲ್ಲ. ಹುಟ್ಟಿದವರು ಭೌತಿಕವಾಗಿ ಶಾಶ್ವತರಲ್ಲವೆಂಬುದೂ ನಿಜ. ಸಾವು ಸರ್ವಾಂತರ್ಯಾಮಿ ಎಂಬುದೂ ನಿಜ. ಆದರೆ, ಅಕಾಲಮೃತ್ಯು ಅಸಹನೀಯವಾದುದು. ಹೀಗಾಗಿ, ಜನರ ಜೀವಾಂತ್ಯದ ಸಾವು ಅನಿರೀಕ್ಷಿತವಾಗಿ ಸಂಭವಿಸುವ ಕವಿಗೆ ನೋವಿದೆ, ಕನಿಕರವಿದೆ. ಹೀಗಾಗಿ, ಸಾವಿನೊಡೆಯನ ಎದುರು ಕರಮುಗಿದ ಕವಿ, ಗಳಿಗೆ ತಡಮಾಡು ಒಡೆಯ ಎಂದು ಬೇಡುತ್ತಾರೆ. "ಉಸಿರಿನಂತೆ ಸರ್ವಾಂತರ್ಯಾಮಿಯಾದ ಸಾವೇ ನೋವಾಗದ ಅರಿವಾಗದೆ ಆರಿಸಿಕೋ ತಂದೆ, ಎಲೆ ಉದುರುವಷ್ಟು ಹಗುರವಾಗಿ ಇಬ್ಬನಿ ಕರಗುವಷ್ಟು ಹಿತವಾಗಿ ಬಿಡಿಸಿಕೊ ತಂದೆ ನಿನ್ನ ಬನದ ಕುಸುಮಗಳನು..ಆಡಲು ಬಿಟ್ಟು ಬೆನ್ನ ಹಿಂದೆಯೇ ನಿಂತಿರುವೆ ತುಸು ತಾಳು ತಂದೆ ಕರುಳಿಗೊಂದು ಪದ ಕಟ್ಟಿಬಿಡುವೆ..." ಎಂದು ಜೀವಪರ ನ್ಯಾಯವಾದಿಯಾಗಿ ಜೀವನ ನ್ಯಾಯ ಕೇಳುತ್ತಾರೆ. ಅಂದು ತನ್ನ ಗಂಡನ ಅನ್ಯಾಯದ ಸಾವನ್ನು ಕಂಡು ಮರುಗಿ, ಮರಳಿ ನ್ಯಾಯ ಪಡೆದ ಸತಿಸಾವಿತ್ರಿಯಂತೆ ಕವಿ ಕಲ್ಲಳ್ಳಿಯವರು ಸಾವಿನೊಡೆಯನ ಮುಂದೆ ಮಂಡಿಸಿದ ನ್ಯಾಯವಾದವು ಆಪ್ತವೆನಿಸುತ್ತದೆ.

ಮೀನುಮಾರುವ ಅಜ್ಜಿಯ ಕಂಡು ಕವಿ ಮರುಗುವ ಪರಿ ಹಾಗೂ ಅಜ್ಜಿಯ ಬಳಿ ಸೀಗಡಿ ಖರೀದಿಸಿದ ನಡೆಯು ಕಾರುಣ್ಯಪೂರ್ಣ ಕವಿತನಕ್ಕೆ ದ್ಯೋತಕವಾಗಿದೆ.

**“ಮೀನಿಗಿಂತ ಮಿಗಿಲಾಗಿ**

**ಇವಳೇ ಬೇಯುವ ಪರಿಗೆ**

**ಯಾವ ಹಣದ ಚೀಲವೂ**

**ಕರುಣೆಯ ಚೆಲ್ಲುವುದಿಲ್ಲ....**

**ತೂತು ಕತ್ತಲಲ್ಲಿ ತಾತನ ಮದುವೆ**

**ಮಾಡುವ ಹಾಗೆ**

**ಸಂತೆಯೆಂಬೊ ದಿಬ್ಬಣಕ್ಕೆ ನುಗ್ಗುತ್ತೇನೆ**

**ನೆಗಡಿ ನಾಶಕ್ಕೆ ಸೀಗಡಿ ತಗೊಂಡೆ**

**ಹತ್ತು ಗ್ರಾಂ ಹೆಚ್ಚಿಗೆ ಹಾಕಿ**

**ಹಸುಗಂದನ ಹಾಗೆ ನಕ್ಕಳು**

**ಇದೊಂದು ಮನವಿ ನಿಮ್ಮಲ್ಲಿ**

**ಸಂತೆಗೆ ಹೋದಾಗ ಮರೆಯದಿರಿ**

**ಒಂದ್ಮೈವತ್ತು ಗ್ರಾಂ**

**ಸೀಗಡಿನೋ ಕರಿಮೀನೋ**

**ತಗೋಳ್ಳೋದು**

**ಆ ಸಂಜೆಯ ಹುಣ್ಣಿಮೆಗೆ**

**ಹಿಡಿ ಅನ್ನವಾಗೋದು...." (ಸಂಜೆಯ ಹುಣ್ಣಿಮೆ)**

ನಾಗರೀಕತೆಯ ನಾಗಾಲೋಟಲ್ಲಿ ಎದ್ದುನಿಲ್ಲುತ್ತಿರುವ 'ಮಾಲ್'ಗಳ ಮಧ್ಯೆ ಸಿಕ್ಕಿ 'ಸಂತೆ'ಗಳು ತೆರೆಗೆ ಸರಿಯುವಂತಾಗುತ್ತಿದೆ. ಅತಿಲಾಭದ ದುರಾಸೆಯಿಂದ ಬಂಡವಾಳಶಾಹಿಗಳು ಶ್ರೀಸಾಮಾನ್ಯರ ಬದುಕನ್ನು ದುರಂತಕ್ಕೆ ದೂಡುತ್ತಿದೆ; ಕೊಳ್ಳುಬಾಕುತನಕ್ಕೆ ಪಕ್ಕಾಗಿಸುತ್ತಿದೆ. ಹೀಗಾಗಿ, ಸಂತೆಯಂಥ ದೇಸಿಮಾರುಕಟ್ಟೆಗಳಲ್ಲಿ ಸಣ್ಣಪುಟ್ಟ ವ್ಯಾಪಾರ ಮಾಡಿಕೊಂಡು ಬದುಕುತ್ತಿದ್ದ ಈ ಅಜ್ಜಿಯಂಥ ಶ್ರೀಸಾಮಾನ್ಯರ ಬದುಕು ಯಾತನಮಯವಾಗುತ್ತಿದೆ. ಸೂಕ್ಷ್ಮಪ್ರಜ್ಞೆಯ ಕವಿ ಈ ವಿದ್ಯಮಾನವನ್ನು ಗ್ರಹಿಸಿ, ಲೋಕವು ಕೊಳ್ಳುಬಾಕುತನದಿಂದ ಬಿಡಿಸಿಕೊಂಡು ಶ್ರೀಸಾಮಾನ್ಯಮುಖಿಯಾದ ಸಂತೆಯತ್ತ ಹೋಗಿಬರುವಂತೆ ಸೂಚಿಸುತ್ತಿರುವುದು ಆದರಣೀಯ.

ಅಂದಿನಿಂದ ಇಂದಿಗೂ ಅಸಂಖ್ಯ ಹೆಣ್ಣು ಮಕ್ಕಳ ಸಾಲುಸಾಲು ಸಾವಿಗೆ ಲೋಕದ ಸ್ಪಂದನೆ ಆತ್ಮವಂಚನೆಯಿಂದ ಕೂಡಿದುದು. ಹೀಗಾಗಿ, ಕವಿಗೆ ಗುರುತರವಾದ ಜವಾಬ್ದಾರಿಯಿದೆ. ಲೋಕವು ಮರೆಯುವುದನ್ನು ಮರೆಯಬಾರದಂತೆ ತನ್ನೊಳಗೆ ಕಾಪಿಟ್ಟು ಪೊರೆಯುವ ತಾಯ್ತನ ಕಾವ್ಯಕ್ಕಿದೆ ಎಂಬುದನ್ನು ಕವಿ ಕಲ್ಲಳ್ಳಿಯವರು ಸಾಬೀತುಪಡಿಸಿದ್ದಾರೆ.

**"ಅವಳ ಸಾವು ಯಾರಿಗೂ ಸೂತಕ ತರಲಿಲ್ಲ**

**ಅವಳು ಬೆಳೆಸಿದ ದಾಸವಾಳಕ್ಕೆ**

**ಯಾವ ಗಾಯವೂ ಇಲ್ಲ**

**ಅವಳ ಸಾವು ತಾಯಿಗರುಳ ಕವಿಯೊಬ್ಬನ**

**ಎದೆಯಲ್ಲಿ ಪದವಾಯಿತೇ ಹೊರತು**

**ಮತ್ತೊಂದು ಹೃದಯದ ಕಂಬನಿ ಒರೆಸುವ ಕೈಯಾಗಲಿಲ್ಲ..."(ಅವಳ ಸಾವು)**

**"ನನ್ನೊಳಗಿನ ಆಸೀಫಾ ದಾನವ್ವ ಸೌಜನ್ಯ**

**ನಿರ್ಭಯಾಗಳೆಂಬ ಆರದ ಗಾಯಗಳಿಗೆ**

**ಯಾರೂ ಉತ್ತರವಾಗಲಾರರು**

**ನೆಲವೇ ನೀನೂ ಕೂಡ...." (ನಿನ್ನ ತಪ್ಪುಗಳನ್ನು ತಿದ್ದಿಕೋ ನೆಲವೇ)**

ಅವ್ವ ನಂಗೇಲಿಯಿಂದ ಹಿಡಿದು ಅಕ್ಕ ಅಸೀಫಾ ಒಡಗೂಡಿ ತಂಗಿ ಸೌಜನ್ಯಳ ವರೆಗೂ ಲೋಕಪೊರೆದ ಹೆಣ್ಣುಗಳ ಸಾವು–ನೋವುಗಳನ್ನು ಮರೆತು ಮೆರೆವುದು ಅಕ್ಷಮ್ಯವೂ ಅಮಾನವೀಯವೂ ಆದ ಪೌರುಷ–ಲೋಕದ ನಡಾವಳಿ. ಇದನ್ನು ಸೂಕ್ಷ್ಮವಾಗಿ ಅರಿಯಬಲ್ಲ ಶಕ್ತಿಯಿರುವುದು ಕಾವ್ಯಯಾನಕ್ಕೆ ಮಾತ್ರ. ಹೀಗಾಗಿಯೇ ಕಲ್ಲಳ್ಳಿಯಂಥವರ ಕಾವ್ಯವೆಂಬುದು ನಿಚ್ಚಂಪೊಸತಾದ ಲೋಕಬೆಳಗು.

ಸಾವಿನ ಸಹನೀಯ ಸಂಘಟನೆಯ ಬಗ್ಗೆ ಜೀವಪರತೆಯುಳ್ಳ ಕವಿ ಕಲ್ಲಳ್ಳಿಯವರು ಯಾವುದೇ ಜೀವ–ವಸ್ತುವಿನ ಅಂತ್ಯ ಮತ್ತು ಅಂತ್ಯದಿಂದ ಆರಂಭವಾಗುವ ಹೊಸದೊಂದು ನಡೆಯ ಬಗ್ಗೆಯೂ ಸೂಕ್ಷ್ಮತೆಯುಳ್ಳವರು. ಯಾವುದೇ ಒಂದು ಜೀವ–ವಸ್ತು ಸಂಗತಿಯ ಅಂತ್ಯದಿಂದ ಲೋಕವು ಅರಿಯಬೇಕಾದ ಅನಂತ ಅಚ್ಚರಿಗಳಿವೆ ಎಂಬುದನ್ನೂ "ಏನನ್ನೋ ಕಲಿಸಲು ಯತ್ನಿಸುತ್ತಿದೆ" ಎಂಬ ಕವಿತೆಯಲ್ಲಿ ತಿಳಿಸಬಯಸುತ್ತಾರೆ.

**"ಮುಗಿದ ಕಥೆಯ ಪಾತ್ರವೊಂದು**

**ಏನೋ ಹೇಳಲು ಯತ್ನಿಸುತ್ತಿದೆ**

**ಮುಗಿದ ಪಯಣದ ಹೆಜ್ಜೆಯೊಂದು**

**ಏನೋ ತೋರಲು ಯತ್ನಿಸುತ್ತಿದೆ**

**ಉದುರಿದ ಎಲೆಯ ಮೇಲಿನ ಮಮತೆ**

**ನೆರಳಾಗಿ ಹರಡಿರುವಾಗ**

**ಕರಗಿದ ಮಂಜಿನ ಹನಿಯೊಂದು**

**ಏನೋ ಸಾರಲು ಯತ್ನಿಸುತ್ತಿದೆ**

**ಹೂವಿನ ಬಣ್ಣವು ಗುರಿ ಮುಟ್ಟಿದ**

**ಖುಷಿಯಲಿ ಮೆರೆಯುತಿರುವಾಗ**

**ಮುರಿದ ರೆಕ್ಕೆಯ ಚಿಟ್ಟೆಯೊಂದು**

**ಏನೋ ಹೇಳಲು ಯತ್ನಿಸುತ್ತಿದೆ**..."

ಕಲ್ಲಳ್ಳಿ ಕಾವ್ಯದರ್ಶನದಲ್ಲಿ ಅರಿವಾಗುವಂತೆ **"**ಅಂತ್ಯ**"**ವು ಅತ್ಯಂತ ಮಹತ್ವವುಳ್ಳದ್ದು; ಅಂತ್ಯವನ್ನು ಸಮರ್ಥವಾಗಿ ಅರಿತರೆ ಮಾತ್ರ ನವನಡೆ ಸಾಧ್ಯ. ಹೀಗಾಗಿ, The End ಎಂಬುದ End ಆಗಿರುವುದಿಲ್ಲ. ಶರಣರ ಪ್ರಕಾರ ವಿಶ್ವಾಂತ್ಯವೆಂದರೆ ಅನಂತ, ಶೂನ್ಯ, ಬಯಲು. ವಿಶ್ವಮಾನವ ಕವಿ ಕುವೆಂಪು ಅವರ ಪ್ರಕಾರ ಅನಿಕೇತನ ಪ್ರಜ್ಞೆ, ಎಲ್ಲಿಯೂ ನಿಲ್ಲದಿರುವಂಥದ್ದು; ಕೊನೆಯ ಮುಟ್ಟದಿರುವಂಥದ್ದು. ಅನಂತವಾಗಿರುವಂಥದ್ದು; ಆಗು ಆಗು ಆಗು ಆಗುತ್ತಲೇಯಿರುವಂಥದ್ದು. So that, the End is not the End; it is the Endless and Every End Is New Beginning. ಜಗತ್ತು ನಿತ್ಯವೂ ಪರಿವರ್ತಶೀಲವೆಂದವರು ಬುದ್ಧಗುರು. ಸಂಸ್ಕೃತದಲ್ಲಿ अन्त: अस्ति प्रारम्भ ಅಂತ ಒಂದು ಮಾತಿದೆ. ಅಂದರೆ, ಪ್ರತೀ ಅಂತ್ಯವೂ ಆರಂಭವೇ ಆಗಿದೆ. ಕೆಲವು ವಿಶ್ವದ ಅನೇಕ ತತ್ವಜ್ಞಾನಿಗಳು ಅಂತ್ಯಾರಂಭ ಕುರಿತ ಚಿಂತನೆ ಮಾಡಿರುವುದಿದೆ. ತತ್ವಜ್ಞಾನಿ ಸೆನೆಕಾ ಅವರ, "Every new beginning comes from other beginning's end." ಎಂದರೆ, ಪ್ಲೇಟೋ ಅವರು, " The beginning is the most important part of the work." ಎಂದಿದ್ದಾರೆ. ಬುದ್ದಗುರುವು ಹೇಳಿದ, "No matter how hard the past is, you can always begin again" ಎಂಬ ಮಾತೂ ಟಿ.ಎಸ್.ಎಲಿಯಟ್ ಅವರ **"**Every moment is a fresh beginning." ಎಂಬ ಮಾತೂ ಇಲ್ಲಿ ಸ್ಮರಣೀಯ. ಈ ದಿಸೆಯಲ್ಲಿ ಕವಿ ಕಲ್ಲಳ್ಳಿ ಅವರು

ಜಗತ್ತಿನ ಪ್ರತೀ ಜೀವ–ವಸ್ತುವೊಳಗಣ ಸ್ಥಿತಿಗತಿಗಳನ್ನು ಸೂಕ್ಷ್ಮಸಂವೇದನೆಯಲ್ಲಿ ಅರಿಯಬೇಕಿರುವುದು ಅವಶ್ಯಕವೆಂದಿರುವುದು ಮನನೀಯ. ಕವಿಯೇ ಮತ್ತೊಂದು ಕಡೆ ಹೇಳುವಂತೆ,

**"ಒಂಟಿತನದ ಕುಲುಮೆಯಲ್ಲಿ ಕುಶಲವಾಗಿ**

**ಅರಳಿರುವ ಹೂವುಗಳಿಲ್ಲವೆ ಕಲ್ಲಳ್ಳಿ**

**ಇರಿಯಲು ಕಾದಿರುವ ಕತ್ತಿಯಂಚಿನ**

**ಬೆಳಕಿನಲ್ಲಿ ಚಲಿಸಿ ಛಲಗೊಳ್ಳಬೇಕೆನಿಸುತ್ತಿದೆ..."**

ಇರಿಯಲು ಕಾದಿರುವ ಕತ್ತಿಯ ಅಂಚಿನಲ್ಲೇ ನಡೆದು ನವಯಾನ ಚಲನಶೀಲಗೊಳಿಸಬೇಕಾದ ಆತ್ಯಂತಿಕ ಛಲವು ಮಹೋನ್ನತವಾದುದು. ಜೀವನಯಾನದೊಳು ಎದುರಾಗುವ ಸವಾಲುಗಳಿಗೆ ನಾವೆಂದೂ ಹೆದರಬಾರದು. ಸವಾಲುಗಳ ಎದುರಾಗಿಯೇ ಈಸಬೇಕು, ಇದ್ದು ಜೈಸಬೇಕು. ಇಂಥ ಛಲವನ್ನು ಕಲ್ಲಳ್ಳಿ ಕಾವ್ಯವು ಸಮರ್ಥವಾಗಿ ಮೂಡಿಸುತ್ತದೆ.

ದಲಿತಲೋಕವು ಅನೂಚಾನವಾಗಿ ಅಂತರ್ಗತ ಮಾಡಿಕೊಂಡು ಬಂದ ಜೀವಕಾರುಣ್ಯ ಎಲಿಮೆಂಟುಗಳ ಆದಿಮತ್ವವನ್ನೂ, ಅಪೂರ್ವ ಅಸ್ಮಿತೆಯನ್ನೂ ಕಲ್ಲಳ್ಳಿಯವರ ಕವಿತೆಗಳಲ್ಲಿ ಸೊಗಸಾಗಿ ಒಡಮೂಡಿಬಂದಿದೆ. ದಲಿತ ಸಂಸ್ಕೃತಿಮೀಮಾಂಸೆಯ ಮಹಾದರ್ಶನವೂ ಅಮೋಘವಾಗಿಯೇ ಕಂಡುಬರುತ್ತದೆ. 'ನೀರಗಂಟಿ', 'ನನ್ನ ದಾಖಲೆ', 'ಹುಚ್ಚೆಳ್ಳು ಗಿಡದ ನೆರಳು', 'ಮಿನುಗು', 'ದುಡಿನಾದ', 'ಬುದ್ಧ' ಮೊದಲಾದ ಕವಿತೆಗಳನ್ನು ಈ ಹಿನ್ನೆಲೆಯಲ್ಲಿ ಪರಾಮರ್ಶಿಸಬಹುದು.

ಊರಹಿತಕಾರಿಣಿಯಾದ 'ನೀರಗಂಟಿ'ಯ ಪಾರಂಪರಿಕ ನಡೆಯನ್ನು ವಿಶ್ವಹಿತಕಾರಿಣಿಯಾದ ಬುದ್ಧನಡೆಯೊಂದಿಗೆ ಅನುಸಂಧಾನ ಮಾಡಿರುವ ರೀತಿಯು ಅರ್ಥವತ್ತಾಗಿದೆ.

**"ಕಾಲುವೆ ಕೋಡಿಯ ತುಂಬೆಲ್ಲ**

**ಈ ನೆಲದ ಮಗುವಿನ**

**ಹೆಜ್ಜೆ ಗುರುತಿನ ರಂಗವಲ್ಲಿಯ ಕಲರವ**

**ಗದ್ದೆ ಗದ್ದೆಯಲ್ಲಿ ನೀರಾಗಿ ಹರಿದು**

**ಪೈರು ಪೈರಲ್ಲಿ ಹಸಿರಾಗಿ ಮೆರೆದು**

**ಕಾಳು ಕಾಳಲ್ಲಿ ಹಾಲಾಗಿ ಕೂಡಿ**

**ಹಸಿವಿನ ಮುಂದೆ ಅನ್ನವಾಗಿ ಅರಳುವ ಬುದ್ಧ**

**ಈ ಹುಲಿ ಕುಣಿಯದಿದ್ದರೆ**

**ಯಾವ ದೇವರೂ ಬೀದಿಗಿಳಿಯುವುದಿಲ್ಲ**

**ಯಾವ ಹಕ್ಕಿಯೂ ಗೂಡು ಸೇರುವುದಿಲ್ಲ" (ನೀರಗಂಟಿ)**

ಭಾರತ–ವಿಶ್ವವೆಂಬೋ ಊರೊಳಗೆ ಬೇರೂರಿಕೊಂಡ ಜನಪರ ದಲಿತ ಕಾಯಕತ್ವ ಹಾಗೂ ಜೀವಪರ ಬೌದ್ಧ ಕಾರುಣ್ಯತ್ವಗಳು ಕೂಡಲಸಂಗಮವಾದ ದಲಿತಬೌದ್ಧ ದಾರ್ಶನಿಕ ಮೀಮಾಂಸೆಯನ್ನು ನಿರ್ವಚಿಸುತ್ತದೆ ಈ ಕಾವ್ಯಯಾನ.

**ಸಿಂಧೂ ಬಯಲಿನ ಇಟ್ಟಿಗೆಯ ಚೂರು**

**ಬುದ್ಧನ ಹಾದಿಯ ಸಣ್ಣ ಇರುವೆ**

**ಬಸವಾದಿ ಶರಣರ ಪಾದದ ಧೂಳು**

**ದಾಸ ಪದದೀಪದ ಕುಡಿ**

**ಭೀಮಬನದ ಗರಿಕೆಯ ಚಿಗುರು**

**ತಂಗಳಿಟೇಶ್ವರನ ಸಾಕ್ಷಿಯಾಗಿ**

**ಇದೇ ನನ್ನ ಮೂಲ ಇದೇ ನನ್ನ ಕುಲ (ನನ್ನ ದಾಖಲೆ)**

**ಹುಚ್ಚೆಳ್ಳು ಗಿಡದ ನೆರಳು**

**ಭೂತಮ್ಮನ ಬೆಟ್ಟದ ಜುಟ್ಟನ್ನು ಮುಟ್ಟಿ**

**ನೆಲದಮ್ಮನ ಕರುಳಿನ ಆಳವ ತಟ್ಟಿ**

**ಹಾಡೆಂದಿತೋ ಪದವ ಕಟ್ಟೆಂದಿತೋ....**

**ಗರಿಕೆ ಬೇರಿನ ಆಳಕ್ಕೆ ಇಳಿದು**

**ಗಂಗೆಯ ಅಸ್ಥಿಪಂಜರ ಹುಡುಕಿ**

**ಹಾಡೆಂದಿತೋ ಪದವ ಕಟ್ಟೆಂದಿತೋ.... (ಹುಚ್ಚೆಳ್ಳು ಗಿಡದ ನೆರಳು )**

ತಮ್ಮ ಸಾಮುದಾಯಿಕ ಅಸ್ತಿತ್ವವನ್ನೂ ಲೋಕದ ಒಳಿತನ್ನೂ ಒಟ್ಟಾಗಿ ಒಡಲಿಗೆ ಹಾಕಿಕೊಂಡು ನಡೆದ ನುಡಿಕಾಯಕ ಪರಂಪರೆಯನ್ನು ಜೀವಂತಿಕಯನ್ನು ಸಾಕ್ಷ್ಯೀಕರಿಸುವ ಸಾಲುಗಳಿವು. ಪರಂಪರೆಯಲ್ಲಿಯೂ ಆಧುನಿಕ ನಾಗರಿಕತೆ ಯಾನದಲ್ಲಿಯೂ ಈ ನೆಲ-ಜಲ-ಜನಗಳ ಮೇಲೆ ನಡೆಯುತ್ತಿರುವ ದೌರ್ಜನ್ಯಗಳು ನಿರಂತರ. ಹೀಗಾಗಿ ಲೋಕಹಿತದ ನುಡಿಕಾಯಕವೂ ನಿರಂತರ ಎಂಬ ದರ್ಶನಧ್ವನಿಯು 'ಹುಚ್ಚೆಳ್ಳು ಗಿಡದ ನೆರಳಿ'ನಲ್ಲಿದೆ.

**"ಗುಡಿಸಲ ತುಂಬೆಲ್ಲ**

**ಕೊರಬಾಡಿನ ತೂಗು ತೋರಣ**

**ಹಸಿಮೆಣಸಿನ ಕಾಯಿಗೊಜ್ಜು**

**ಸುಟ್ಟ ಬಾಡಿನ ಗಮಲು ಅಬ್ಬಾ!**

**ಪಾಡಲು ಪದ ಸಾಲದಾಗುತ್ತದೆ.....**

**ಅದೊಂದು ಬೆರಗಿನ ಬೆರಗು**

**ಕೇಳಿಕೆಯಲ್ಲಿ**

**ಸುಳಿದು ಹೋಗುವ ತಣ್ಣನೆಯ ಹಾಡು**

**ಬಾಲ್ಯದ ಹೊಲದಲ್ಲಿ**

**ಕೊಯ್ದಷ್ಟು ಬೆಳೆ**

**ಒಂದು ದೊಡ್ಡ ನಿಟ್ಟುಸಿರು**

**ಕಣ್ಣಂಚಿನ ಮಿನುಗು**

**ಜೀವ ತಂತಿಯ ಸದಾ ನುಡಿಸುತ್ತದೆ (ಮಿನುಗು)**

ಜೀವಹಿಂಡುವ ತಾರತಮ್ಯಗಳ ನಡುವೆ ಜೀವಚೈತನ್ಯವನ್ನು ಬೆಳಗಿಕೊಂಡು ಬಾಳಿದ ದಲಿತ ಸಂಸ್ಕೃತಿಯು ತನ್ನದೇ ಆದ ಅಸ್ತಿತ್ವವನ್ನು ಸಾಧಿಸಿಕೊಂಡಿರುವಂಥದ್ದು. ಯಾವುದೇ ಸಹ್ಯಾಸಹ್ಯಗಳ ಸೀಮೆಗಳಿಲ್ಲದೆ ಸಹಮಾನವರಿಗೆ

DOI: 10.59176
http://www.kristujayantijournal.com/index.php/KJKSP

ಕೇಡಾಗದಂತೆ ತನ್ನದೇ ಹಾಡು, ಪಾಡು, ಆಹಾರ, ವಿಹಾರಗಳನ್ನು ರೂಢಿಸಿಕೊಂಡು ಬಂದ ತಳಸಮುದಾಯಗಳ ಸಾಂಸ್ಕೃತಿಕಯಾನದ ಮಿನುಗು ಅನನ್ಯವಾದುದು.

ಭಾರತದಲ್ಲಿ ಇಂದಿಗೂ ಸಾಧಿಸಲಾಗದ "ಭೂ ವಿಕೇಂದ್ರೀಕರಣ"ದ ಆಶಯವನ್ನು ಕಟ್ಟಿಕೊಟ್ಟಿರುವ ಕವಿತೆ "ದುಡಿನಾದ". ನಿಸರ್ಗದತ್ತ ಭೂಮಿಯ ಮೇಲೆ ಮನುಷ್ಯ ತನ್ನ ಯಾಜಮಾನ್ಯವನ್ನು ಸಾಧಿಸಿಕೊಂಡು ಅದಕ್ಕೆ ಸಂಸ್ಕೃತಿಗಡಿಯನ್ನೂ ಹಾಕಿಕೊಂಡು ಸಹಮಾನವರಿಗೆ ಸಮಾನಭೂಮಿಯ ಹಂಚಿಕೊಳ್ಳುವಲ್ಲಿ ಅಸಮಾನತೆಯಿಂದಲೇ ಜೀವಿಸುತ್ತಿದ್ದಾನೆ. ಭೂಸ್ವಾಮ್ಯಕ್ಕೆ ಪೂರಕವಾಗಿ ಜಾತಿ, ವರ್ಣ ಮೊದಲಾದ ವಿಕೃತಿಗಳನ್ನೂ ಹುಟ್ಟುಹಾಕಿ ತನ್ನ ಹೆತ್ತ-ಹೊತ್ತ ಭೂಮಿಗೇ ಕಂಟಕವಾಗಿಬಿಟ್ಟಿದ್ದಾನೆ. ಇದರಿಂದ ನೊಂದು ಬೆಂದುಹೋದ ಸಹಮಾನವರು ಅಸಂಖ್ಯ. ಭೂಹೀನ ಬಡವರಿಗೆ ಭೂಮಿ ಸಿಗಬೇಕೆಂಬ ಮಹೋನ್ನತ ಆಶಯ ಹೊತ್ತು ವಿನೋಬಾ ಭಾವೆ ಅಂಥವರು 'ಭೂದಾನ ಚಳವಳಿ' ಆರಂಭಿಸಿದರು. ಭಾರತ ಸಂವಿಧಾನ ಶಿಲ್ಪಿಯೆನಿಸಿದ ಅಂಬೇಡ್ಕರರು 'ಭೂ-ರಾಷ್ಟ್ರೀಕರಣ'ವನ್ನು ಒತ್ತಾಯಿಸಿದರು. ಶಿವರಾಮ ಕಾರಂತರು 'ಚೋಮನ ದುಡಿ'ಯಲ್ಲಿ ಚೋಮನು ಸ್ವಾಭಿಮಾನದಿಂದ ವ್ಯವಸಾಯ ಮಾಡಲು ಹಿಡಿ ಭೂಮಿಗಾಗಿ ಹಂಬಲಿಸಿ ದುಡಿಯನ್ನು ಬಡಿದ. ದುಡಿವಜನ ಹಾಗೂ ದಲಿತಜನ ಪರವಾದ ಆ ಎಲ್ಲ ದನಿಗಳೂ ಇಂದಿಗೂ ಈ ನೆಲದಲ್ಲಿ ಪ್ರತಿಧ್ವನಿಸುತ್ತಲೇ ಇವೆ. ಇಂದಿನ ರಿಯಲ್ ಎಸ್ಟೇಟ್ ವಿಸ್ತರಿಸಿಕೊಂಡಿರುವ ರಿಯಾಲಿಟಿಯ ನಡುವೆಯೂ ಈ ದನಿಗೆ ದನಿ ನೀಡುವಂತೆ ಕವಿ ಕಲ್ಲಳ್ಳಿಯವರು ದುಡಿ ಬಡಿಯುತ್ತಿರುವುದು ಮನೋಜ್ಞವಾಗಿದೆ:

**ಯಾರೂ ಈಗ ನನ್ನೊಳಗೆ**

**ಹಾಡುತ್ತಿಲ್ಲ**

**ಅಳುತ್ತಿಲ್ಲ ದುಡಿ ನುಡಿಸುತ್ತಿಲ್ಲ**

**ಆದರೇ!**

**ಅರಿವಿಲ್ಲದೆ ಅಳುತ್ತಿದ್ದೇನೆ ಹಾಡುತ್ತಿದ್ದೇನೆ**

**ನಾನೇ ದುಡಿಯಾಗಿ ನುಡಿಯುತ್ತಿದ್ದೇನೆ**

**ಅದೇ ಹಾಡು**

**ಅದೇ ಹಾಡು**

DOI: 10.59176
http://www.kristujayantijournal.com/index.php/KJKSP

**ಅದೇ ಹಂಬಲ ಮತ್ತೆ ಮತ್ತೆ**

**ಹೊಲಬೇಕು ಹೊಲಬೇಕು ಹೊಲಬೇಕು**

**ಕಣ್ಣಗಲ ಹೊಲಬೇಕು । (ದುಡಿನಾದ)**

ಹೀಗೆ, ಕಣ್ಣಗಲ ಹೊಲಬೇಕು ಎಂಬ ಅದಮ್ಯ ಹಂಬಲವುಳ್ಳ ಕವಿಯೂ ಇತರರ ಹೊಲ ಕಂಡು ಕರುಬುವುದಿಲ್ಲ. ಮಳೆಯಿಲ್ಲದೆ ಮರಣದತ್ತ ಸಾಗುತ್ತಿರುವ ಅಂಥ ಹೊಲಗಳ ಮೇಲೆ ವರುಣನ ಆಗಮನವಾಗಲಿ ಎಂಬ ಕಾರುಣ್ಯ ತೋರುತ್ತಾನೆ.

**ಹೊಲವಿಲ್ಲದ ದಾಸ ಒಲವಿಂದ ಬೇಡುವೆ**

**ತೋರಿಸಬಾರದೆ ಕರುಣಾ । ವರುಣ....**

**ಹೊಲ ಹೊಲ ಬೆಂಗಾಡು ಹಾಡಿಲ್ಲದ ಗೂಡು**

**ಸುರಿಯಬಾರದೆ ಸುಗುಣ । ವರುಣ**

**ಕುಪ್ಪಳಿಸಿ ಬರುತಿಹುದು ಮರಣ ।**

ಇಂಥಲ್ಲಿ, ದಲಿತತ್ವ–ಮಾತೃತ್ವ–ಬೌದ್ಧತ್ವದ ಕೂಡಲಸಂಗಮವಾದ ಸಾಂಸ್ಕೃತಿಕ–ದಾರ್ಶನಿಕ ಮೀಮಾಂಸೆಯನ್ನು ಕವಿಯು ಸಮರ್ಥವಾಗಿ ಒಡಮೂಡಿಸಿದಂತೆ ಕಾಣುತ್ತದೆ. ಇದಕ್ಕೆ ಪೂರಕವಾಗಿ "ಬುದ್ಧ" ಹಾಗೂ "ವನ್ನಮ್ಮ ಚೆನ್ನಮ್ಮ" ಕವಿತೆಗಳನ್ನೂ ನೋಡಬಹುದು.

**ಮರಳುಗಾಡಿನಲ್ಲಿ ಮುಗುಳ್ನಗುವ**

**ಒಂಟಿ ಗರಿಕೆ**

**ಚಿಂದಿ ಆಯುವ ಕಂದನ**

**ಅಪ್ಪಿಕೊಳ್ಳುವ ಇರುಳೆಂಬ ತಾಯಿ**

**ಬಯಲು ಸೀಮೆಯ ಬರಗಾಲದ**

**ಒಂದು ಹುಣ್ಣಿಮೆ**

**ಶತ್ರುವನ್ನೂ ಗೆಲ್ಲುವ ಆತ್ಮವಿಶ್ವಾಸ...**

**ವಿಶ್ವಾಸದ ವಿಹಾರ**

**ಅಗಣಿತ ಮಹಾಕಾವ್ಯಗಳನು**

**ಎದೆಯೊಳಗೆ ಹುದುಗಿಸಿಕೊಂಡು**

**ಖಾಲಿಯಾಗಿ**

**ಕಾಣುವ ಬಯಲ ಪುಟ (ಬುದ್ಧ)**

ನೆಲಮೂಲದ ಮಾತೃತ್ವ ಹಾಗೂ ದಲಿತತ್ವಗಳ ಸಾಂಸ್ಕೃತಿಕಯಾನದಲ್ಲಿ ಬೆರೆತುಕೊಂಡ ಬೌದ್ಧತ್ವವು ಅಂತರ್ಗತಗೊಂಡ ಬಗೆಯು ಚಾರಿತ್ರಿಕವಾದುದು. ಒಂದರೊಳಗೊಂದು ಬೇರೂರಿಕೊಂಡು ನೆಲವನ್ನು ಬೆಳಗಿದ ಬಗೆಯಿಂದಲೇ ಸಾರ್ವಕಾಲಿಕ ವಿಶ್ವಮೈತ್ರಿಯ ಪ್ರಸ್ತುತತೆ ಸಾಧ್ಯವಾಗಿರುವುದು.

**ವನ್ನಮ್ಮ ಚನ್ನಮ್ಮ ಅಕ್ಕತಂಗ್ಯರಂತೆ**

**ಕೆರೆಯೇರಿ ಮೇಲೆ ಇರೋರಂತೆ – ಅವರು**

**ಬಡವರನು ಪೊರೆದ ಕೈಗಳಂತೆ**

**ಕೆರೆಯೆಂದರೆ ಕೆರೆಯಲ್ಲಿ ಕಡಲಿಗೆ ಕಡಿಮಿಲ್ಲ**

**ಏಳೂರ ಹೊರೆಯುವ ತಾಯಂತೆ – ಸುತ್ತೆಲ್ಲ**

**ಹಸಿರು ಹೊದ್ದ ಭೂಮ್ತಾಯ ನಲಿವಂತೆ....**

**ಕಾಳುಕಡಿ ಕೊಡೋರಂತೆ ಬುದ್ಧಿ ಮಾತು ಹೇಳೋರಂತೆ**

**ನಡೆಯೋಕೆ ಹೊಸ ದಾರಿ ತೋರೋರಂತೆ – ಅವರು**

**ಬೆಳಕಾಗಿ ಊರನ್ನು ಬೆಳಗೋರಂತೆ.... (ವನ್ನಮ್ಮ ಚನ್ನಮ್ಮ)**

ಜೀವರಾಶಿಯ ಜೀವಧಾತುವಾದ ಜಲರಾಶಿಯನ್ನು ಕುರಿತು ಜಗತ್ತಿನಾದ್ಯಂತ ಅಸಂಖ್ಯ ಕಲ್ಚರಲ್ ಮಿತ್ಥುಗಳಿವೆ. ಭಾರತದೊಳಗೂ ಜಲವನ್ನು ಕೇಂದ್ರೀಕರಿಸಿ ನೆಲಮೂಲದ 'ಗಂಗಮ್ಮ' ತಾಯಿಯಿಂದ ಹಿಡಿದು ಕವಿ ಕಲ್ಲಳ್ಳಿಯವರು ಕಟ್ಟಿಕೊಟ್ಟಿರುವ ಸ್ಥಳೀಯ ನೆಲೆಯ 'ವನ್ನಮ್ಮ ಚನ್ನಮ್ಮ'ನ ವರೆಗೂ ಮನೋಜ್ಞವಾದ ಮಿತ್ಥುಗಳು

ಕಾಣಸಿಗುತ್ತವೆ. ನಾಡಿಗೆ ನೀರಿನ ಹಾಹಾಕಾರವನ್ನು ತಪ್ಪಿಸಲಿಕ್ಕಾಗಿ ಈ ನೆಲದ ತುಂಬಾ ತಾಯಂದಿರು ಮಾಡಿರುವ ತ್ಯಾಗ–ಬಲಿದಾನಗಳು ಪ್ರಾತಃಸ್ಮರಣೀಯವಾದುವು. ಕವಿಯು ಕೇಳಿದ ಇಂಥ ಮಾಸ್ತಿಗಲ್ಲಿನ ಕಥಾನಕವನ್ನು ಸೊಗಸಾಗಿ ನಿರೂಪಿಸಿದ್ದಾರೆ. ನೆಲದ ಉಳಿವು–ಬೆಳೆವಿಗಾಗಿ ತನ್ನ ತಾ ತೇದುಕೊಂಡ ಸ್ತ್ರೀಯರ ಸಾಂಸ್ಕೃತಿಕಯಾನದ ದರ್ಶನವು ಇಲ್ಲಿದೆ. ಆದಿಮನೆಲೆಯ ಜೀವಕಾರುಣ್ಯವುಳ್ಳ ಮಾತೃತ್ವದ ಮಹತ್ವವನ್ನು ಕಟ್ಟಿಕೊಡುವ ಮೂಲಕ ಆಧುನಿಕ ಕಾವ್ಯಯಾನವೂ ವಿಶಾಲಗೊಂಡಂತಾಗಿದೆ.

ಲೋಕದ ಭಾವಾನುಭಾವಗಳನ್ನು ತಮ್ಮ ಕಾವ್ಯಕೆತ್ತನೆಯಿಂದ ಕೆತ್ತಿ ಕೆತ್ತಿ ಸುಂದರವಾದ ಸೃಜನಮೂರ್ತಿ ಮಾಡಬಲ್ಲ ಹಾಗೂ ಸೃಜನಶೀಲ ಮೂರ್ತ ಸಂದರ್ಭಗಳನ್ನು ಒಡೆದು ಕಡೆದು ತಮ್ಮ ಕಾವ್ಯಧರ್ಮದಲ್ಲಿಟ್ಟು ತೂಗಿ ನೆಲೆ–ಬೆಲೆ ನೀಡಬಲ್ಲ ತಣ್ಣನೆಯ ನುಡಿಯೋಗಿಯಂತೆ ಕವಿ ಕಲ್ಲಳ್ಳಿಯವರು ಅಚ್ಚರಿ ಮೂಡಿಸುತ್ತಾರೆ. ಈ ಮಾನ್ಸೂನ್ ಕವಿತಾಗುಚ್ಛದ 'ಅವಳ ಸಾವು', 'ಅಸಹಾಯಕತೆ', 'ಅಂಬೇಡ್ಕರ್', 'ಕ್ಷಮಿಸು ದಾರಿಯೇ ನಡೆಯುವುದು ಅನಿವಾರ್ಯ', ಮೊದಲಾದ ಕವಿತೆಗಳಲ್ಲಿ ಕಾಣುವ ಸಾಂಸ್ಕೃತಿಕ–ಮನೋವೈಜ್ಞಾನಿಕ ನೆಲೆಯ ಅರಿವಿನಯಾನದ ಸೃಜನರೂಪವೂ ಗಮನಾರ್ಹ

**ಆನಂದ, ಬಲು ಅವಸರದ ಮನುಷ್ಯ**
**ಹೀಗೆ ಬಂದು ಹಾಗೆ ಹೊರಟು ಬಿಡುತ್ತಾನೆ**
**ತುಸು ಹೊತ್ತಾದರೂ**
**ನನ್ನೊಡನೆ ಇರಲೆಂಬ ಹಂಬಲ ನನ್ನದು**
**ಆನಂದ! ಇತ್ತೀಚೆಗೆ ಬಲು ಅಪರೂಪವಾಗಿಬಿಟ್ಟ**
**ಕಾಡುವ ನೆನಪೊಂದನು ಉಳಿಸಿ**
**ಕ್ಷಣದಲ್ಲೇ ಕಾಣೆಯಾಗಿಬಿಟ್ಟ (ಆನಂದ)**

'ಆನಂದ'ವೆಂಬುದು ಒಂದು ಬಗೆಯ ಮನೋಗತಿ–ಸ್ಥಿತಿ. ಕಾವ್ಯಮೀಮಾಂಸೆಯಲ್ಲಿ ಶಾಸ್ತ್ರಜ್ಞರು ಆಧ್ಯಾತ್ಮಿಕವಾಗಿ 'ಶಾಂತಿ', 'ಸಮಾಧಿ', ಎಂದೆಲ್ಲಾ ಹೇಳುವುದೂ ಈ ಬಗೆಯ 'ಆನಂದ' ಪ್ರಾಪ್ತಿಯನ್ನೇ. ಇಂಥ ಆನಂದ ಮತಿಯ ಸಾಂಗತ್ಯ ಸಾಧನೆ ಕುರಿತು ಸೂಕ್ಷ್ಮವಾದ ಮೂರ್ತರೂಪವನ್ನು ಕವಿ ನೀಡದ್ದಾರೆ.

**ದೇವರೆಂಬ ಶಾಶ್ವತ ಶವವನ್ನು**

**ಅಲಂಕರಿಸಿದ ಹೂಗಳೆಲ್ಲ**

**ಉಸಿರುಗಟ್ಟಿಸುವ ಗಂಧ ಧೂಪ**

**ಆರತಿಗಳೆಂಬ ವಿಷಾಯುಧಗಳ ಬಗ್ಗೆ**

**ಗಜಲ್ ಬರೆದು**

**ಸಾವನ್ನು ಸ್ವಾಗತಿಸುತ್ತಿವೆ...(ಅಸಹಾಯಕತೆ)**

ಇಲ್ಲಿ, ಹೂವುಗಳ ಆಂತರ್ಯದ ಮೂಲಕ ಕಾಯಕಜೀವಿಗಳ ನೋವಿನ ಅನಾವರಣವಾಗಿದೆ ಎನ್ನುವಂತೆಯೇ ಸ್ತ್ರೀಲೋಕದ ಆಳವಾದ ದುಃಖಾನುಸಂಧಾನವೂ ಸಾಧ್ಯವಾಗಿರುವುದನ್ನು ಗಮನಿಸಬಹುದು.

**ತುಟಿಯ ದಾಟಿ ಹೋಗದ ಎದೆಯ ಗೋಳು**

**ಕುದಿ ಕುದಿಯುತ್ತಲೇ ಸಾಗುವುದು ಕಷ್ಟ ಸಾಧ್ಯ**

**ರೆಪ್ಪೆಯ ಆಣೆಕಟ್ಟು ದುರ್ಬಲಗೊಳ್ಳದಿರಲು**

**ನಗುವ ಮೆತ್ತಿಕೊಂಡು ಅರ್ಥವಾಗದ ಪದವನ್ನು**

**ಗುನುಗುತ್ತ ನಡೆಯಲು ಯತ್ನಿಸಿದ್ದೇನೆ**

**ಮನದ ಭಾರ ಹೆಜ್ಜೆಗಳಿಗೆ ಇಳಿದಿದ್ದು ಗೊತ್ತಾಗಲೇ ಇಲ್ಲ**

**ಕ್ಷಮಿಸು ದಾರಿಯೇ ನಡೆಯುವುದು ಅನಿವಾರ್ಯ (ಕ್ಷಮಿಸು ದಾರಿಯೇ...)**

ಜೀವನಯಾನದಲ್ಲಿ ಅರ್ಥವತ್ತಾದ 'ಮೌನಯಾನ'ಕ್ಕೆ ಅನಂತ ಅರ್ಥಗಳಿರುತ್ತವೆ; ಅಗಣಿತ ಅಭಿವ್ಯಕ್ತಿಗಳು ಅಂತರ್ಗತವಾಗಿರುತ್ತವೆ. ಜೀವಪರತೆಯ ಮನವುಳ್ಳವರು ಮೌನದಿಂದ ನಡೆಯುವುದು ತ್ಯಾಗಮಯೀ, ಕರುಣಾಮಯೀ ಮನೋಲಯ ಗತಿಯೆಂಬುದನ್ನು ಕವಿ ಇಲ್ಲಿ ಪ್ರತಿಬಿಂಬಿಸಿದ್ದಾರೆ.

**ಮನುಷ್ಯತ್ವದ ಹೂವು ತಾಯಿಯ ಕರುಳು**

**ಲಕ್ಷಾಂತರ ಮೂಗರ ಹಾಡು । ಬುದ್ಧ**

**ಕಟ್ಟಲು ಬಯಸಿದ ನಾಡು ।**

**ನಾವುಣ್ಣೋ ಅಗಳು ಆ ಹೂವಿನ ಭಿಕ್ಷೆ**

**ಋಣವರಿತು ನಾವು ಬೆಳಿಬೇಕು । ಅದರ**

**ಕನಸನ್ನು ನನಸು ಮಾಡಬೇಕು ॥**

**ಅಂತಿಂಥ ಹೂವಲ್ಲ ಎಂದೆಂದೂ ಬಾಡಲ್ಲ**

**ಜಗವನ್ನೇ ಕಾಡಿದ ಕೇದಿಗೆ । ಹೂವು**

**ಎದೆಯಲ್ಲಿ ಮುಡಿಬೇಕು ನಾವು (ಅಂಬೇಡ್ಕರ್)**

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅಂಬೇಡ್ಕರ್ ಕುರಿತು ಮೂಡಿಬಂದಿರುವ ಅನೇಕ ಕವಿತೆಗಳಲ್ಲಿ ಕಲ್ಲಳ್ಳಿ ಅವರ ಕವಿತೆಯು ವಿಶಿಷ್ಟವಾದುದಾಗಿದೆ. ಮಣ್ಣಿನಾಳದಿಂದ–ಕೆಸರಿನಾಳದಿಂದ ಮೂಡಿಬರುವ ಹೂವು ದೇವರು–ಮಾನವರ ಮುಡಿಗೇರಿ ಮಾನ್ಯತೆಯನ್ನೂ ಧನ್ಯತೆಯನ್ನೂ ಪಡೆಯುವಂಥದ್ದು. ಎಲ್ಲರಿಗೂ ಎಲ್ಲಕಾಲಕ್ಕೂ ಬೇಕಾಗುವಂಥದ್ದು; ಕೆಸರಲ್ಲಿದ್ದರೂ ಗುಡಿಯಲ್ಲಿದ್ದರೂ ಏಕವಾದ ಸಮಾನ ಸುಗಂಧ ಸೂಸುವಂಥದ್ದು. ಇಂಥ ಹೂವಿನ ಸ್ಥಿತಿ–ಗತಿಯನ್ನು ಭಾರತವು ಕಂಡ ಮೇರುನಾಯಕ ವ್ಯಕ್ತಿತ್ವವಾದ ಅಂಬೇಡ್ಕರ್ ಅವರ ಜೀವನ–ದರ್ಶನಕ್ಕೆ ರೂಪಕವಾಗಿಸಿದ ಬಗೆಯೂ ಅರ್ಥಪೂರ್ಣವಾಗಿದೆ. ಅಂಬೇಡ್ಕರ್ ಅವರನ್ನು ಜಾತಿಗೆ ಸೀಮಿತಗೊಳಿಸುವ, ಭಾರತೀಯರ ಮನೋಲಯದಿಂದ ಅಳಿಸುವ ಯಾವ ಬಗೆಯ ಸಾಂಸ್ಕೃತಿಕ ರಾಜಕಾರಣವನ್ನು ಮಾಡಿದರೂ ಅಂಬೇಡ್ಕರ್ ಭಾರತೀಯರೆಲ್ಲ ಸಾರ್ವಕಾಲಿಕ ಆಪತ್ಬಾಂಧವರಾಗಿಯೇ ಬೆಳೆಯುತ್ತಿದ್ದಾರೆ; ಸಮಾನತೆಯ ನದಿಯಾಗಿ ಸರ್ವರೊಳಗೂ ಹರಿಯುತ್ತಲೇ ಇದ್ದಾರೆ. ಕವಿ ಕಲ್ಲಳ್ಳಿ ಕಂಡಂತೆ ಇಂಥ ಜಗದ್ವಂದ್ಯ ಹೂವಾದ ಅಂಬೇಡ್ಕರರನ್ನು ನಮ್ಮ ಮುಡಿಯಲ್ಲಲ್ಲ, ಎದೆಯಲ್ಲಿ ಮುಡಿದು ಅವರ ಕನಸನ್ನು ಈಡೇರಿಸಬೇಕಾಗಿದೆ.

ಪ್ರಸ್ತುತ ಕಾವ್ಯಗುಚ್ಛದ ತುಂಬೆಲ್ಲಾ ಕವಿ ಕಲ್ಲಳ್ಳಿಯವರು ನವರೂಪಕಗಳ ಬೇಸಾಯಗಾರನಾಗಿ ಕಾಣುತ್ತಾರೆ. ಉದಾಹರಣೆಗೆ ನೋಡುವುದಾದರೆ, 'ಜೀವಜಲ' ಕವಿತೆಯಲ್ಲಿ ನಿರೂಪಿತವಾಗಿರುವ ಹಸಿರು–ಹುಲಿಯ ಅನುಸಂಧಾನವು ಹೊಸ ಪ್ರಜ್ಞಾಪಾರಮಿತತ್ವದಿಂದ ಕೂಡಿದುದಾಗಿದೆ:

**ಈ ಹುಲಿ ಕುಣಿಯದಿದ್ದರೆ**

**ಯಾವ ದೇವರೂ ಬೀದಿಗಿಳಿಯುವುದಿಲ್ಲ**

**ಯಾವ ಹಕ್ಕಿಯೂ ಗೂಡು ಸೇರುವುದಿಲ್ಲ (ನೀರಗಂಟಿ)**

**ದುತ್ತನೆ ಜಿಗಿದು ಬಂದ ಹಸಿರ ಹುಲಿ**

**ಬೇಗೆಯನ್ನೆಲ್ಲ ತಿಂದು ತೇಗಿ**

**ಹಸಿದೊಡಲ ತಣಿಸಲು**

**ತೆನೆಯ ಪನಿ ಹಿಡಿದು ಬರುತಿದೆ (ಜೀವಜಲ)**

ವೃಕ್ಷಮಾತೆ ಎಂದು ಪ್ರಸಿದ್ಧರಾದ ಸಾಲು ಮರದ ತಿಮ್ಮಕ್ಕನವರನ್ನು ಕುರಿತಾದ ಕವಿತೆಯಲ್ಲಿ 'ಹಸಿರು'ತನಕ್ಕೆ ಕಸಿಗಟ್ಟಿರುವ ರೂಪಕ ನಾವೀನ್ಯತೆ ಆಪ್ಯಾಯಮಾನವಾದುದು.

**ಎದೆಯೊಳಗಿನ ಪ್ರಾಣದ**

**ಹೂವರಳಿಸುವ ಪ್ರತಿ ಉಸಿರಿನ ಮೇಲೆ**

**ತಿಮ್ಮಕ್ಕನ ಮಮತೆಯ ನೆರಳಿನಲ್ಲರಳಿದ**

**ಹಸಿರಿನ ರುಜುವಿದೆ....**

**ಬನ್ನಿ ಸುಧಾರಿಸಿಕೊಳ್ಳಿ**

**ಮಮತಾಮಯಿ ಅಕ್ಕರೆಯಿಂದ**

**ಕಟ್ಟಿದ ಹಸಿರಿನ ತೊಟ್ಟಿಲಿದೆ**

**ಆಕೆ ಎಳೆಯುತ್ತಿರುವ**

**ಹಸಿರ ಬಂಡಿಯ ನೊಗಕೆ**

**ಹೆಗಲು ನೀಡುವ ಹೊಣೆ**

**ನಮ್ಮೆಲ್ಲರ ಮೇಲಿದೆ....**

**ಎದೆಯಿಂದೆದೆಗೆ**

**ಹಸಿರು ದೀಪವ ಸಾಗಿಸಬೇಕು... (ಹಸಿರು ದೀಪ)**

ಪರಿಸರ ಸಂರಕ್ಷಣೆಯ ಪರಂಪರೆಯನ್ನೂ ಹಾಗೂ ಪರಿಸರ ಪ್ರಜ್ಞಾಪಾರಮಿತತೆಯನ್ನೂ ಒಟ್ಟಾಗಿ ಮೂಡಿಸುತ್ತಿರುವ ಹಸಿರು ರೂಪಕಗಳು ನುರಿತ ನುಡಿಶೀಲತೆಗೆ ಸಾಕ್ಷಿಯಾಗಿವೆ.

ಅನ್ಯಹೃದಯದ ಆಂತರ್ಯ ಅರಿಯದೆ ಕಾವ್ಯಕೃಷಿಗೈವ ಕವಿವರ್ಯರ ದಾರ್ಷ್ಟ್ಯವನ್ನೂ ಕಲ್ಲಳ್ಳಿಯವರು ಸೂಕ್ಷ್ಮವಾಗಿ ಮೌಲ್ಯೀಕರಣಕ್ಕೆ ಒಡ್ಡುವ ಬಗೆಯು ಅಂತರಂಗವನ್ನು ಕಲಕುತ್ತದೆ.

**ಒಂದು ಗಟ್ಟಿ ಕವಿತೆಗಾಗಿ**

**ಬಹಳದಿನದಿಂದ ಕಾಯುತ್ತಿದ್ದಳು.**

**ಒಂದು ದಿನ, ಅವಳದೇ ಕನಸಿನ ಹೆಣ ತೇಲಿ ಬಂತು**

**ಅವನು ನಗುತಲಿದ್ದ!**

**ಈಗ, ಅವಳೆದಿರು ಕವಿತೆಯೆಂದರೆ**

**ಮಡಿಲು ತಡುಕಿ ಕಡಲಾಗುತ್ತಾಳೆ**

**ವಿಷಾದಗಳ ಮುಡಿದುಕೊಂಡು**

**ನೋಟ ಬದಲಿಸಿ ನಗುತ್ತಾಳೆ**

**ಅವನು ಬೀಗುತ್ತಿದ್ದ! (ಕವಿತೆ ಅವನು ಮತ್ತು ಅವಳು)**

ದೇವರು, ಧರ್ಮಾಚಾರಗಳ ಹೆಸರಿನಲ್ಲಿ ಅಸಮಾನತೆ, ದೌರ್ಜನ್ಯವನ್ನು ಚಾಲ್ತಿಯಲ್ಲಿಟ್ಟುಕೊಂಡು ಬಂದ ಸಾಂಸ್ಕೃತಿಕ ವಿಕೃತತೆಯನ್ನು ನಿರ್ಭಿಡೆಯಿಂದ ಪ್ರಶ್ನಿಸುವ ಎದೆಗಾರಿಕೆಗೂ ಒಂದಷ್ಟು ಸಹಾಯಕತೆಗೂ ತಣ್ಣನೆಯ ಪ್ರತಿಸ್ಪಂದನೆಯನ್ನು ಕವಿ ಹೀಗೆ ನೀಡಿದ್ದಾರೆ:

**ಕೇರಿಗೆ ಬಾರದ ತೇರನ್ನು**

**ನೋಡಲು ಬರುವ**

**ಖಾಲಿ ಜೇಬಿನ ಹುಡುಗನ**

DOI: 10.59176
http://www.kristujayantijournal.com/index.php/KJKSP

**ಎದೆಯಲ್ಲಿ**

**ತೇರಿನ ಮೇಲೆ ಇನ್ನೂ ಮರೆಯುತ್ತಿದ್ದ**

**ಚಂಡುಮಲ್ಲಿಗೆ ಹೂಗಳು**

**ಪ್ರಶ್ನೆಗಳಾಗಿ ರೆಕ್ಕೆ ಬಿಚ್ಚಿ**

**ಎಳೆ ನಾಗರಗಳಾಗಿ ಕಚ್ಚುತ್ತವೆ (ರೆಕ್ಕೆ ಬಿಚ್ಚಿದ ಪ್ರಶ್ನೆಗಳು)**

ತಾನು ಪೌರುಷಪ್ರತಿನಿಧಿಯೆಂದು ಬೀಗಿಕೊಳ್ಳುವ ಲೋಕಮತಿಯು ತನ್ನೊಳಗನ್ನು ಅರಿತು ಬೆಳಗಿಕೊಳ್ಳಬೇಕಾದ ಸ್ವಾನುಭಾವ ದರ್ಶನದಲ್ಲಿ ಕವಿ ನಿವೇದಿಸಿಕೊಂಡ ಬಗೆಯಿದು:

**ನನ್ನ ಕಣ್ಣುಗಳು ಮಳೆಯಾದವು**

**ಬೆನ್ನಿಗಂಟಿದ್ದ ಸಾಲು ಸ್ತಬ್ಧವಾಯಿತು**

**ಹೆಣ್ಣೆಂದರೆ ತಾಯಿಯೆಂದು**

**ಗಂಡೆಂದರೆ ಮಗುವೆಂದು**

**ಮತ್ತೆ ಮತ್ತೆ ಹೇಳಿ ಹೋಯಿತು ಸಂಜೆ (ಒಂದು ಸಂಜೆ)**

ಯಾವುದೇ ಸಂಸ್ಕೃತಿಯ ಬೆನ್ನುಲಬು 'ವ್ಯವಸಾಯ' ಎಂಬುದು ಸರ್ವಮಾನ್ಯವಾದ ಸಂಗತಿ. ಆದರೆ, ಆಧುನಿಕ ನಾಗರೀಕತೆ ಹಾಗೂ ಉಳ್ಳವರ ರಾಜಕಾರಣವು ವ್ಯವಸಾಯ ಮಾಡುವ ರೈತರ ಬಗ್ಗೆ ತೋರುತ್ತಿರುವ ಅನಾದರವು ಅಮಾನವೀಯವಾದುದು; ನೆಲದ ನಾಶಕ್ಕೆ ಮುನ್ನುಡಿಯಾದುದು. ಕುವೆಂಪು ಅವರು ರೈತನನ್ನು 'ನೇಗಿಲಯೋಗಿ'ಯಾಗಿ ಪರಿಭಾವಿಸಿದ ರೀತಿಯು ಕನ್ನಡದ ಸಂದರ್ಭದಲ್ಲೇ ವಿನೂತನವಾದುದು. ಈ ದಿಸೆಯಲ್ಲಿ ಕಲ್ಲಳ್ಳಿ ಕಣ್ಣಲ್ಲಿ ಮೂಡಿದ ರೈತರೂಪಕವು ಅದ್ಭುತವಾಗಿದೆ. ನೆಲವಿಮುಖಿಯಾದ ದುಡಿಮೆಯ ನಡೆಯನ್ನು ವಿಡಂಬಿಸುತ್ತಲೇ, ನೆಲಕ್ಕೆ ಬೇಕಾಗಿದ್ದ ರೈತನೆಂಬ 'ಹಳ್ಳಿಸೂರ್ಯ'ನು ಅಸ್ತಂಗತನಾಗುವ ಸ್ಥಿತಿಗೆ ಬಂದಿರುವುದನ್ನು ಮನೋಜ್ಞವಾಗಿ ಮೂಡಿಸಿದ್ದಾರೆ:

**"ಬೆವರನ್ನು ಬೆಂಗಳೂರಿಗೆ**

**ಸಾಗಿಸುವ ಖುಷಿಯಲ್ಲಿವೆ ರೈಲುಗಳು**

**ಹೊಲಗದ್ದೆಯಲ್ಲಿ ನೋವಿನ ಬೆಳೆ ಬೆಳೆದು**

**ಸಾವಿನ ಫಸಲು ಪಡೆದು**

**ಮುಳುಗಲು ಸಿದ್ದವಾಗಿದ್ದಾನೆ**

**ಹಳ್ಳಿಯ ಸೂರ್ಯ (ಕಾದೇ ಇದ್ದೇವೆ)**

ಇದೇ ರೀತಿಯಲ್ಲಿ, ಗ್ರಾಮಭಾರತವನ್ನು ಅಂತಸ್ಥವಾಗಿಟ್ಟುಕೊಂಡಿರುವ ಜಾನಪದ ನುಡಿಯಾನದ ತಾಯಿಬೇರಿನಿಂದ ಹೊಸಚಿಗುರು ಮೂಡುವಂತೆ **"**ದಾಳಿಂಬೆ**"** ಎಂಬ ತ್ರಿಪದಿ ಕಾವ್ಯಪ್ರಯೋಗವನ್ನೂ ಕವಿ ಕಲ್ಲಳ್ಳಿ ಮಾಡಿದ್ದಾರೆ:

**"ಹೊನ್ನಿಲ್ಲದ ಮನೆಯಾಗ ಹೊನ್ನಂತೆ ಹುಟ್ಯಾನ**

**ಹೊನ್ನಂತ ಮಾತ್ಹೇಳೆ ದಾಳಿಂಬೆ । ಕಂದಾನ**

**ಚಂದಾವ ಬಣ್ಣೀಸೆ ದಾಳಿಂಬೆ ॥**

**ಹೊಳೆವ ಕಣ್ಣೆರಡು ಬರಿತಾವೆ ಕವಿತೇಯ**

**ಹಾಡಿ ನಲಿಯೇ ದಾಳಿಂಬೆ । ಕಂದಾನ**

**ಕವಿಯೆಂದು ಸಾರೆ ದಾಳಿಂಬೆ ॥**

**ಹೂವಂತ ಪಾದದಿ ಎದೆಗೆ ಒದ್ದಾನಮ್ಮ**

**ಹೂವಾಯ್ತು ಜೀವ ದಾಳಿಂಬೆ । ಕಂದಾನ**

**ಪಾದಕ್ಕೆ ಪದಕಟ್ಟೆ ದಾಳಿಂಬೆ ॥...." (ದಾಳಿಂಬೆ)**

ಜನಪದ ಸಾಹಿತ್ಯ ಪ್ರಕಾರಗಳಲ್ಲಿ ವಿಶಿಷ್ಟವಾದ **'**ತ್ರಿಪದಿ**'** ಕಾವ್ಯಪ್ರಸ್ತುತಿಯ ಅನನ್ಯತೆ ಹಾಗೂ ಆಧುನಿಕ ಸಂದರ್ಭದ ಪ್ರಯೋಗಶೀಲ ಸಾಧ್ಯತೆಗಳನ್ನು ನಿಚ್ಚಂಪೊಸತಾಗಿಸುವಲ್ಲಿ ಕವಿ ಕಲ್ಲಳ್ಳಿಯವರು ಯಶಸ್ವಿಯಾಗಿದ್ದಾರೆ ಎನ್ನುವಲ್ಲಿ ಯಾವುದೇ ಅನುಮಾನವಿಲ್ಲ. ಹೀಗೆ, ಜಾನಪದ ಮೂಲದ ಕಾವ್ಯಪ್ರಯೋಗಗಳಿಂದ ಹಿಡಿದು 'ಹನಿಗವಿತೆ'ಯೆಂಬ ಆಧುನಿಕ ಕಿರುಕಾವ್ಯರೂಪವನ್ನೂ ಸತ್ವಪೂರ್ಣವಾಗಿ ಸೃಜಿಸಿದ್ದಾರೆ. ಜೊತೆಗೆ ಗಜಲ್ ಕಾವ್ಯಧಾರೆಯಲ್ಲಿ ಮಿಂದೆದ್ದು ಬಂದಿರುವ ಸಾಕ್ಷ್ಯವಾಗಿ ಈ ಮಾನ್ಸೂನ್ ಕಾವ್ಯಮಾರುತಗಳು ಅಲ್ಲಲ್ಲಿ

ಸುರಿದುಹೋಗುವ ಕಾವ್ಯಜಲವು ತಂಪೆರೆಯುತ್ತದೆ. ನೆಲದ ತುಂಬಾ ಮೈತುಂಬಿಕೊಂಡಿರುವ ಪಾರಂಪರಿಕ ಹಾಗೂ ಆಧುನಿಕ ಮಿತ್ಥಗಳನ್ನು ತಮ್ಮ ಕಾವ್ಯಯಾನದ ಮೂಲಕ ಮತ್ತಷ್ಟು ಮೆರುಗಿತ್ತ ಮಹತ್ವದ ಕವಿಯಾಗಿ ಕಲ್ಲಳ್ಳಿ ಕಾಣುತ್ತಾರೆ.

ಕಲ್ಲಳ್ಳಿ ಕಾವ್ಯಮಾರ್ಗದ ಮತ್ತೊಂದು ವಿಶಿಷ್ಟತೆಯೆಂದರೆ ದೇಸಿ ಪದಗಳ ಕಸಿಗಟ್ಟುವಿಕೆ. ಕನ್ನಡದ ನುಡಿಬೆಡಗುಗಳ ನವನವೀನತೆಯ ಜೊತೆಗೆ ಕೋಲಾರ ನೆಲದ "ನುಡುಗು"ಗಳನ್ನು ತಮ್ಮ ಕಾವ್ಯದೊಳಗೆ ಸೊಗಸಾಗಿ ಕಸಿ ಮಾಡಿದ್ದರಿಂದಾಗಿ ಕಾವ್ಯವು ಮತ್ತಷ್ಟು ಮೆರುಗುಗೊಂಡಿದೆ. ಉದಾಹರಣೆಗೆ, ಕವಿತೆಗಳಲ್ಲಿನ ಈ ಸಾಲುಗಳನ್ನು ಪರಾಂಬರಿಸಬಹುದು. **'ಊರುಬಾಗಿಲಿನ ತೋರಣಕೆ', 'ಕೆರೆ ಕಾಲುವೆ ಕೋಡಿಯ ತುಂಬೆಲ್ಲ', 'ಜಾರೋ ತಾರೆಗೆ ತಣಿಗೆ ಹಿಡಿದಂತೆ', 'ಹುಚ್ಚೆಳ್ಳು ಗಿಡದ ನೆರಳು, ಭೂತಮ್ಮನ ಬೆಟ್ಟದ ಜುಟ್ಟನ್ನು ಮುಟ್ಟಿ, ನೆಲದಮ್ಮನ ಕರುಳಿನ ಆಳವ ತಟ್ಟಿ, ಹಾಡೆಂದಿತೋ ಪದವ ಕಟ್ಟೆಂದಿತೋ..., ತಣಿಗಾನ ತೋಪಿನ ತಂಪಲ್ಲಿ ತಿರುಗಿ, ಅದ್ವಯ ಪಾದದ ಧೂಳನ್ನು ಮುಡಿದು, ಹಾಡೆಂದಿತೋ ಪದವ ಕಟ್ಟೆಂದಿತೊ...,ಬೆಣಚಕ್ಕಿಯ ಹಾಳುಬಿದ್ದ ಗೂಡು, ಹೂಳು ಮೊಟ್ಟೆ, ಅಜ್ಜಿಯ ಸೆರಗಂಚಿನ ಆಸರೆ ಸಾಕು', 'ಈ ಜಗದ ಹುಸಿ ಪಾತ್ರದ, ತಾಪತ್ರೆಯಿಂದ ಬಿಡಿಸಿಕೋ, ಪ್ರಶಾಂತನಾಗು, ಅನಂತನಾಗು ಒಲವೆ...', 'ಕರಿಮೀನು ಮಾರುವ, ಕರಿ ಮುದುಕಿಯ ಕಣ್ಣಲ್ಲಿ, ತುಂಬಿ ತುಳುಕುವ ಸಂತೆ..., ಖಾಲಿ ಕಿಸೆಯ ಕೌಸು ರೆಕ್ಕೆಯ, ನೊಣವೊಂದು ಮತ್ತೆ ಮತ್ತೆ ಸುಳಿಯುತ್ತದೆ..., ಸಂತೆಗೆ ಹೋದಾಗ ಮರೆಯದಿರಿ, ಸೀಗಡಿನೋ ಕರಿಮೀನೋ, ತಗೋಳ್ಳೋದು, ಆ ಸಂಜೆಯ ಹುಣ್ಣಿಮೆಗೆ, ಹಿಡಿ ಅನ್ನವಾಗೋದು...', 'ಆ ಬಯಲು ಬಂಡೆ, ಬಡ್ಡು ಬಾಡಿನ ಒಂದು ಉಡ್ಡೆ, ಈರಿ ದೊಮ್ಮೆ ಸಲಾಕೆ, ಆ ಎಳೆಯ ಸಾಲು, ಹಗಲು ಚಿಗುರಿದಂತಾಗುತ್ತದೆ , ಗುಡಿಸಲ ತುಂಬೆಲ್ಲ , ಕೊರಬಾಡಿನ ತೂಗು ತೋರಣ, ಹಸಿಮೆಣಸಿನ ಕಾಯಿಗೊಜ್ಜು, ಸುಟ್ಟ ಬಾಡಿನ ಗಮಲು ಅಬ್ಬಾ!, ಪಾಡಲು ಪದ ಸಾಲದಾಗುತ್ತದೆ...', ಸೀಕಲು ಜುಟ್ಟಕ್ಕಲಿ ಬಾಡು, ಉಪ್ಪು ಹುಣಸೆ ಪಿಂದೆ, ಕಿಸಕ್ಕನೆ ನಕ್ಕು ಕಾಡುತ್ತಿದ್ದ, ಮೇಲುಗೇರಿಯ ಬಿಳಿಲಂಗದ, ಸೊಣಕಲಿ ಕಣ್ಮುಂದೆ ಸುಳಿದಾಗ, ಎದೆಯೊಳಗೆ ಕಂಬಳಿಹುಳ ಚಿಟ್ಟೆಯಾಗುತ್ತದೆ...', 'ಕವಿತೆಯೆಂದರೆ ಮಡಿಲು ತಡುಕಿ ಕಡಲಾಗುತ್ತಾಳೆ', 'ಆ ನೆಲದ ಮುದುಕಿ ಇನ್ನೂ ಏಸು ಕಣ್ಣೀರು ಕೂಡಿಡುವಳೊ.', 'ತಲ್ಕಿಂದ್ಲು ಚಂದ್ರನಿಗೆ ಕೊನೆಗೂ ಹೆಣ್ಣು ಸಿಕ್ಕಿತು', 'ವನ್ನಮ್ಮ ಚನ್ನಮ್ಮ ಅಕ್ಕತಂಗ್ಯರಂತೆ, ಕೆರೆಯೇರಿ ಮೇಲೆ ಇರೋರಂತೆ.', 'ಮನೆಯಾಗ ಕಳ್ಳಾಟ ಆಡಬೇಡ ಸಿನಾಲೆ ಬಿಂದಿಗೆ ನೀರು ಹೊತ್ತು ಬಾರೆ ಸಿನಾಲೆ', 'ತೋಟಿ ಸಾಧಪ್ಪ ನೀರಗಂಟಿ ಮೋಟಪ್ಪ ಹೇಳಿದ ಮಾಸ್ತಿ ಕಲ್ಲುಗಳ ಕಥೆಯಿದು', 'ವಿಷಾದಗಳ ಮೀರಿ ಕುಶಾಲು ಪದ ಬರೆಯಬೇಕಂತೆ ನೀನು'** – ಈ ಮೊದಲಾದ ಸಾಲುಗಳಲ್ಲಿ ಕಾಣುವ 'ಕೋಲಾರ ಕನ್ನಡ' ಭಾಷಿಕ ಸಂರಚನೆಗಳು ಸ್ಥಳೀಯ ಭಾಷಿಕಸೌಂದರ್ಯಕ್ಕೆ ಸಾಕ್ಷಿಯಾಗಿವೆ. ಅಲ್ಲದೇ, ಕನ್ನಡ ಭಾಷಾಸಾಗರವು

ಕಂಗೊಳಿಸಲು ಕಾರಣವಾದ ಅಸಂಖ್ಯ ಮಹಾನದಿಗಳಲ್ಲಿ 'ಕೋಲಾರ ಕನ್ನಡ'ವೂ ಒಂದು. ಕೋಲಾರ ಕನ್ನಡದೊಳಗೆ ಮೂಲದ್ರಾವಿಡ ಭಾಷಾಚಹರೆಗಳು ಮಾತೃತ್ವಸೆಲೆಯಾಗಿ ಮುನ್ನಡೆದು ನಾವೀನ್ಯತೆಯ ಕಸಿಗಟ್ಟಿಕೊಂಡಿವುದನ್ನು ಆಕರ್ಷಕವಾಗಿ ಕಂಡುಬರುತ್ತದೆ.

ಕನ್ನಡ ಕಾವ್ಯಲೋಕಕ್ಕೆ ಗಜಲ್‌ಕಾವ್ಯಯಾನದಲ್ಲಿ ಮಹತ್ವದ ಹೆಜ್ಜೆಯಿರಿಸಿ ತಮ್ಮದೇ ಆದ ಕೊಡುಗೆಯನ್ನು ನೀಡಿರುವ ಕವಿ ದೊಡ್ಡಕಲ್ಲಳ್ಳಿ ನಾರಾಯಣಪ್ಪನವರು ಇದೀಗ ನೀಡಿರುವ "ಮಾನ್ಸೂನ್" ಎಂಬ ನವಕಾವ್ಯದ ನುಡುಗುಗಳು ನಿಚ್ಚಂಪೊಸತಾದುವುದು. ಜನಮನಗಳನು ಭಾಗಭಾಗವಾಗಿಸಿ ಭಜಿಸುವ ಬಗೆಬಗೆಯ ಸೀಮೆಯನಳಿಸಿ ಒಳಗೊಳ್ಳುವ ಬಗೆಯನ್ನು, ಮತ್ತೆ ಮತ್ತೆ ಅದರ ಆಳ-ನಿರಾಳ-ನಿರುಮ್ಮಳತೆಯನ್ನು ಲೋಕಕ್ಕೆ ಸಾರಿಬಿಡುವ ಆಶಯದಲ್ಲಿ ಮಾನ್ಸೂನ್ ಕಾವ್ಯಧಾರೆಗೆ ಎದೆಯೊಡ್ಡಬೇಕಿದೆ. ಕವಿಯೇ ಆಶಿಸುವಂತೆ, 'ಈ ಕವಿತೆಗಳಿಗೆ ರಾಜಾಶ್ರಯದ ಹಂಗು ಬೇಕಿಲ್ಲ, ಹುಚ್ಚೆಳ್ಳು ಗಿಡದ ನೆರಳು, ಬೆಣಚಕ್ಕಿಯ ಹಾಳು ಬಿದ್ದಗೂಡು, ಹೂಳು ಮೊಟ್ಟೆ, ಅಜ್ಜಿಯ ಸೆರಗಂಚಿನ ಆಸರೆ ಸಾಕು, ಈ ಕವಿತೆಗಳಿಗೆ ಅಡ್ಡ ಪಲ್ಲಕ್ಕಿಗಳ ಮೋಹವಿಲ್ಲ, ಧಗಧಗಿಸಿ ಉರಿಯುತ್ತಿರುವ ಶತಮಾನಗಳ ನೋವಿನ ಬೆಂಕಿಯಲ್ಲಿ ಪಾಲು ಪಡೆವ ಪ್ರಾಮಾಣಿಕ ನಿಟ್ಟುಸಿರು ಸಾಕು. ಈ ಕವಿತೆಗಳಿಗೆ ಕಿವಿಗಡಚುವ ಚಪ್ಪಾಳೆ ಬೇಕಿಲ್ಲ, ಜೀವಂತ ಕಿವಿಗಳ ಹಾಜರಿ ಬೇಕು ನಿಷ್ಕಲ್ಮಶ ಭಾವವೊಂದು ನಮ್ಮ ತುಟಿಯ ಮೇಲೆ ಮಿನುಗಿ ಹೋದರೆ ಸಾಕು..'(ನಿಟ್ಟಸಿರು ಸಾಕು). ಕಲ್ಲಳ್ಳಿಯ ಕಾವ್ಯಾಕಾಶದಿಂದ ಮೂಡಿಬಂದ ಮಾನ್ಸೂನ್ ಕಾವ್ಯಮಾರುತಗಳು 'ನಾ ನಿಮ್ಮೊಳಗು' ಆಗಿ ಲೋಕದ ನಡೆ-ನುಡಿಯನ್ನು ತಣ್ಣತಣ್ಣಗೆ ಬೆಳಗುವಂತಾಗಲಿ. ಕಲ್ಲಳ್ಳಿ ಕಾವ್ಯಕ್ಕೆ ಶರಣಯ್ಯ ಶರಣು.

**ಆಕರ ಕೃತಿ:**


1. **ಮಾನ್ಸೂನ್ ಕವಿತೆಗಳು; ದೊಡ್ಡಕಲ್ಲಹಳ್ಳಿ ನಾರಾಯಣಪ್ಪ; ಅಲಂಪು ಪ್ರಕಾಶನ, ಅರಿವಿನ ಮನೆ, ಮಾಲೂರು; 2023.**